# ECHO OF HIS CALL

# ಕರೆಯ ಪ್ರತಿಧ್ವನಿ

KANNADA

ECHO OF HIS CALL 1969-2019 GOLDEN JUBILEE

*India's National Spiritual Newspaper*

₹ 10/-

Published monthly in ENGLISH, TAMIL, MALAYALAM, TELUGU, HINDI, KANNADA, MARATHI, BENGALI, GUJARATI, ODIYA, ASSAMESE, PUNJABI, NEPALI, URDU, SINHALA & AFRIKAANS

**Editor : S. SAM SELVA RAJ** | **16 Languages** | **Associate Editor : Rev. R. Rama Krishna**

**Vol. XXIII** | **YEAR OF OUR LORD JESUS CHRIST, 2021 FEBRUARY** | **No. 2**


## ಪರಿಶುದ್ಧ ಸತ್ಯವೇದ

**ದಯವಿಟ್ಟು ಈ ವಾಕ್ಯ ಭಾಗಗಳನ್ನು ಕಂಠಪಾಠ ಮಾಡಿರಿ. ದೇವರ ನಾಮಕ್ಕೆ ಸ್ತೋತ್ರವಾಗಲಿ (ಯೆಶಾಯ 37:1-10 )**

1. ಕೆಟ್ಟ ನಡತೆಯುಳ್ಳವರನ್ನು ನೋಡಿ ಉರಿಗೊಳ್ಳಬೇಡ; ದುರಾಚಾರಿಗಳಿಗೋಸ್ಕರ ಹೊಟ್ಟೆಕಿಚ್ಚು ಪಡಬೇಡ.
2. ಅವರು ಹುಲ್ಲಿನಂತೆ ಬೇಗ ಒಣಗಿ ಹೋಗುವರು; ಸೊಪ್ಪಿನ ಪಲ್ಯದಂತೆ ಬಾಡಿ ಹೋಗುವರು;
3. ಯೆಹೋವನಲ್ಲಿ ಭರವಸವಿಟ್ಟು ಒಳ್ಳೇಯದನ್ನು ಮಾಡು; ದೇಶದಲ್ಲಿ ವಾಸವಾಗಿದ್ದು ನಂಬಿಕೆಯನ್ನು ಅನುಸರಿಸು.
4. ಆಗ ಯೆಹೋವನಲ್ಲಿ ಸಂತೋಷಿಸುವಿ; ಮತ್ತು ಆತನು ನಿನ್ನ ಇಷ್ಟಾರ್ಥಗಳನ್ನು ನೆರವೇರಿಸುವನು.
5. ನಿನ್ನ ಭೂಯಾತ್ರೆಯ ಚಿಂತೆಯನ್ನು ಯೆಹೋವನಿಗೆ ವಹಿಸಿಬಿಟ್ಟು ಭರವಸದಿಂದಿರು; ಆತನೇ ಅದನ್ನು ಸಾಗಿಸುವನು.
6. ಆತನು ನಿನ್ನ ನೀತಿಯನ್ನು ಉದಯದ ಬೆಳಕಿನಂತೆಯೂ ನಿ...ನ್ನ ನ್ಯಾಯವನ್ನು ಮಧ್ಯಾಹ್ನದ ತೇಜಸ್ಸಿನಂತೆಯೂ ಪ್ರಕಾಶಗೊಳಿಸುವನು.
7. ಯೆಹೋವನು ಸನ್ನಿಧಿಯಲ್ಲಿ ಶಾಂತನಾಗಿ ಆತನಿಗೋಸ್ಕರ ಕಾದಿರು; ಕುಯುಕ್ತಿಯಗಳನ್ನು ನೆರವೇರಿಸಿಕೊಂಡು ಅಭಿವೃದ್ಧಿ ಹೊಂದುವವನನ್ನು ನೋಡಿ ಉರಿಗೊಳ್ಳಬೇಡ.
8. ಕೋಪವನ್ನು ಅಣಗಿಸಿಕೋ; ರೋಷವನ್ನು ಬಿಡು. ಉರಿಗೊಳ್ಳಬೇಡ;ಕೆಡುಕಿಗೆ ಕಾರಣವಾದೀತು.
9. ಕೆಡುಕರು ತೆಗೆದುಹಾಕಲ್ಪಡುವರು; ಯೆಹೋವನನ್ನು ನಿರೀಕ್ಷಿಸುವವರೇ ದೇಶವನ್ನು ಅನುಭವಿಸುವರು.
10. ಇನ್ನು ಸ್ವಲ್ಪ ಕಾಲದೊಳಗೆ ದುಷ್ಟನು ಕಾಣಿಸದೆ ಹೋಗುವನು; ಅವನಿದ್ದ ಸ್ಥಳದಲ್ಲಿ ಎಷ್ಟು ವಿಚಾರಿಸಿದರೂ ಅವನು ಸಿಕ್ಕುವದೇ ಇಲ್ಲ.

# ದೇವರ ಮಕ್ಕಳ ಭಾದ್ಯತೆ

# THE INHERITANCE OF GOD'S CHILDREN

(ಮುಖ್ಯ ಸಭೆಯಲ್ಲಿ ಪಾಸ್ಟರ್ ಎಸ್. ಸ್ಯಾಮ್ ಸೆಲ್ವರಾಜ್‌ರವರು ಸಂದೇಶವನ್ನು ಪ್ರಸಂಗಿಸಿದ್ದು)

**ಈಗಲಾದರೋ, ಯಾಕೋಬವಂಶವೇ, ಇಸ್ರಾಯೇಲ್ ಸಂತಾನವೇ, ನಿನ್ನನ್ನು ಸೃಷ್ಟಿಸಿ ರೂಪಿಸಿದವನಾದ ಯೆಹೋವನು ಹೀಗನ್ನುತ್ತಾನೆ - ಭಯ ಪಡಬೇಡ, ನಾನು ನಿನ್ನನ್ನು ವಿಮೋಚಿಸಿದೆನಲ್ಲಾ, ನಿನ್ನ ಹೆಸರುಹಿಡಿದು ಕರೆದೆನಲ್ಲಾ; ನೀನು ನನ್ನವನೇ** (ಯೆಶಾಯ 43 :1).

ಇಲ್ಲಿ ನಾವು ಅದ್ಭುತವಾದ ದೇವರ ವಾಗ್ದಾನವನ್ನು ನೋಡುತ್ತೇವೆ. ಇದು ಈ ಲೋಕದ ಎಲ್ಲಾ ಜನರಿಗೆ ಸಂಬದಪಟ್ಟದಲ್ಲ. ದೇವರ ಎಲ್ಲಾ ವಾಗ್ದಾನಗಳು, ಸತ್ಯವೇದದಲ್ಲಿ ತನ್ನ ಮಕ್ಕಳಿಗೋಸ್ಕರ ಇವೆ ಎಂದು ನಾವು ಕಾಣುತ್ತೇವೆ. ಹೆಚ್ಚು ನಿಖರವಾಗಿ ಹೇಳಬೇಕಾದರೆ, ಈ ವಾಗ್ದಾನಗಳು ಯಾರು ಯೇಸುಕ್ರಿಸ್ತನನ್ನು ತಮ್ಮ ಸ್ವಂತ ರಕ್ಷಕನಾಗಿ ಸ್ವೀಕರಿಸಿದ್ದಾರೋ ಮತ್ತು ಪರಿಶುದ್ಧ ಜೀವಿತವನ್ನು ಜೀವಿಸುತ್ತಾರೋ, ಆತನ ಆಜ್ಞೆಗಳನ್ನು ಅನುಸರಿಸುತ್ತಾರೋ; ಮತ್ತು ಅವರ ಮನಸ್ಸಿನ ನವೀಕರಣದಿಂದ ರೂಪಾಂತರದ ಅನುಭವವನ್ನು ಹೊಂದಿದ್ದಾರೋ (ರೋಮಾ 12:2).

ಒಬ್ಬರು ಸಮಾಜದಲ್ಲಿ ಪ್ರಭಾವಶಾಲಿ ವ್ಯಕ್ತಿ ಅಥವಾ ರಾಜಕೀಯ ನಾಯಕರಾಗಿರುವು ದರಿಂದ,ಈ ಆಶೀರ್ವಾದಗಳು ಅವನ/ಅವಳನ್ನು ತಲುಪುವುದಿಲ್ಲ. ಮೇಲೆ ಹೇಳಿದ ಹಾಗೆ, ಈ ವಾಗ್ದಾನಗಳು ಯಾರು ತಮ್ಮ ಮನಸ್ಸಿನ ನವೀಕರಣದ ರೂಪಾಂತರದ ಅನುಭವವನ್ನು ಹೊಂದಿದ್ದಾರೋ. ಇಂತಹ ಜನರು ಎಲ್ಲಾ ದುರುದ್ದೇಶ ಮತ್ತು ಕೆಟ್ಟ ಆಲೋಚನೆಗಳಿಂದ ಮುಕ್ತ ಹೃದಯಗಳನ್ನು ಹೊಂದಿದ್ದಾರೆ ಮತ್ತು ಸ್ಪಷ್ಟ ಆಲೋಚನೆಯನ್ನು ಹೊಂದಿರುತ್ತಾರೆ. ಮಾರ್ಪಡು ಮನಸ್ಸನ್ನು ಹೊಂದ ಬೇಕಾದರೆ, ಬೇರೆ ಮಾರ್ಗವಿಲ್ಲ, ಯೇಸುವನ್ನು ಬಿಟ್ಟರೆ. ಯೇಸುಕ್ರಿಸ್ತನು ವ್ಯಕ್ತಿಯನ್ನು ಬದಲಾಯಿಸುವ ಮಾರ್ಗವು ಅದ್ಭುತವಾಗಿದೆ. ಬೇರೆ ಯಾವುದೇ ಲೋಕದ ಸಂಗತಿ ಅಥವಾ ಶೀಮಂತಿಕೆ. ಖ್ಯಾತಿ ಅಥವಾ ಜಗತ್ತಿನಲ್ಲಿ ಕಂಡು ಬರುವ ಯಾವುದೇ ಶಕ್ತಿಯು ಮನುಷ್ಯನಲ್ಲಿ ಆ ರೀತಿಯ ಬದಲಾವಣೆಯನ್ನು ತರಬಹುದು. ಯೇಸುವಿನಲ್ಲಿ ವಿಶ್ವಾಸವಿಡು ಮತ್ತು ಮಾರ್ಪಡುಹೊಂದಿರಿ! ನಿಮ್ಮನ್ನು ನೋಡುವವರು ನಿಮ್ಮನ್ನು ನಂಬಲಿ. ನಿಮ್ಮನ್ನು ನೋಡುವವರು ನಿಮ್ಮನ್ನು ಪ್ರೀತಿಸಲಿ.

ನನ್ನ ಸಭಾಪಾಲಕರಾದ ಜಿ. ಸುಂದರಂ ರವರು ಒಂದು ಘಟನೆಯನ್ನು ವಿವರಿಸಿದರು. ಒಂದು ಕುಟುಂಬದಲ್ಲಿ, ಮಗನು ತನ್ನ ಕೆಟ್ಟ ಸ್ನೇಹಿತರಿಂದ ಪ್ರಭಾವಿತನಾಗಿ ತಮ್ಮ ತಂದೆತಾಯಿಯುವರನ್ನು ಬಿಟ್ಟುಹೋಗಬೇಕೆಂದು ಪ್ರಯತ್ನಿಸಿದನು. ತಂದೆತಾಯಿಗಳು ಸಲಹೆ ಕೊಟ್ಟಾಗಿ, ಅವರ ಮಾತನ್ನು ಆತನು ಕೇಳಲಿಲ್ಲ. ಆತನ ತಾಯಿ ತುಂಬಾ ಬೇಡಿಕೊಂಡಳು, ಆದರೆ ಆತನು ತಾಯಿಯ ಮಾತನ್ನು ಕೂಡ ಕೇಳಲಿಲ್ಲ. ಕೊನೆಯದಾಗಿ ತಾಯಿಯು ಆತನಿಗೆ

*(3ನೇ ಪುಟಕ್ಕೆ)*

# ECHO OF HIS CALL

**2019 - GOLDEN JUBILEE YEAR**

**OUR MISSION POLICY**

Wees gerus en gaan nou maar. Die God van Israel sal aan jou gee wat jy van Hom afgesmeek het




**ಅಶ್ವಬಲವು ಯುದ್ಧ ದಿನಕ್ಕಾಗಿ ಸನ್ನದ್ಧ ವಾಗಿದ್ದರೂ ಜಯವು ಯೆಹೋವ ನಿಂದಲೇ**

(ಜ್ಞಾನೋಕ್ತಿಗಳು 21:31).



*from Editors...*

ಕರ್ತನಲ್ಲಿ ನನ್ನ ಪ್ರೀತಿಯ ಸಹೋದರ ಮತ್ತು ಸಹೋದರಿಯರೇ,

ಯೇಸುಕ್ರಿಸ್ತನಲ್ಲಿ ನನ್ನ ಪ್ರೀತಿಯ ಸ್ನೇಹಿತ, ನಾವು ನಿಮ್ಮನ್ನು ಯೇಸುಕ್ರಿಸ್ತನ ನಾಮದಲ್ಲಿ ನಿಮ್ಮೆಲ್ಲರಿಗೆ ವಂದಿಸುತ್ತೇವೆ!

ನೀವು ಹೇಗೆ ಇದ್ದೀರಿ ? ನಾವು ನಿಮ್ಮ ಬಗ್ಗೆ ಆಲೋಚಿಸುವಾಗ ನಮಗೆ ಸಂತೋಷವಾಗುತ್ತದೆ ಮತ್ತು ಪರಲೋಕದ ಪ್ರೀತಿಯಿಂದ ದೇವರು ನಮ್ಮೆಲ್ಲರನ್ನು ಅದ್ಭುತವಾಗಿ ಒಗ್ಗೂಡಿಸಿದ್ದಾನೆ. ಹೌದು, ನಮ್ಮ ಸಂಬಂದವು ಈ ಲೋಕದಲ್ಲ ಆದರೆ ನಿತ್ಯತ್ವದಾಗಿದೆ. ನೀವು ಕೇಳಿ ಆಶ್ಚರ್ಯವಾಗಬಹದು ನಿಮ್ಮನ್ನು ಜ್ಞಾಪಿಸಿಕೊಳ್ಳುವುದನ್ನು ನಾವುಎಂದಿಗೂ ಮರೆಯುವುದಿಲ್ಲ ಮತ್ತು ನಿಮ್ಮ ಪ್ರೀಯವಾದವರನ್ನು ನಾವು ಯಾವಾಗಲು ದೇವರ ಕೃಪಾ ಸಿಂಹಾಸನದ ಮುಂದೆ ತರುತ್ತೇವೆ. ದೇವರು ನಿಮ್ಮನ್ನು ನಿಶ್ಚಯವಾಗಿ ಆಶೀರ್ವದಿಸುವನು ಮತ್ತು ನಿಮ್ಮ ಜೀವನದ ಎಲ್ಲಾ ಸ್ಥಿತಿಗತಿಗಳಲ್ಲಿ ಆತನು ನಿಮ್ಮನ್ನು ಸಂರಕ್ಷಿಸುತ್ತಾನೆ. ನಿಮ್ಮ ಸುತ್ತ ಆತನು ಕಂಟಿ ಹಾಕುವನು ಮತ್ತು ನಿಮ್ಮ ಪ್ರಿಯಕರನ್ನು ಹಾಗು ನಿಮಗೆ ಸಂಬಂದ ಪಟ್ಟವುಗಳನ್ನು ಕಾಯುತ್ತಾನೆ. ಕರ್ತನು ನಿಮ್ಮನ್ನು ಎಂದಿಗೂ ಕೈಬಿಡುವುದಿಲ್ಲ ಹಾಗು ತೊರೆಯುವುದಿಲ್ಲ. ನಮ್ಮ ಕರ್ತನಾದ ಯೇಸುಕ್ರಿಸ್ತನು ಹೇಳುತ್ತಾನೆ, ನಾನು ಈ ಒಡಂಬಡಿಕೆಯನ್ನು ನಿನ್ನೊಂದಿಗೆ ಮಾಡಿಕೊಳ್ಳಲು ನಾನೇ ಯೆಹೋವನು ಎಂದು ನಿನಗೆ ಗೊತ್ತಾಗುವದು (ಯೆಹೆಜ್ಕೇಲ 16:62).

ನಾವು ಇಡೀ ಪ್ರಂಪಚದ ನಾನ ಕಡೆಗಳಿಂದ ಸೋಲುಗಳು ಮತ್ತು ವಾಸಿಯಾಗದ ಜನರ ಸಮಾಚಾರಗಳನ್ನು ನಾವು ಸ್ವೀಕರಿಸುತ್ತಾ ಇದ್ದೇವೆ. ಆದರೆ ಈ ಮಹಾಮಾರಿಯ ಸಮಯದಲ್ಲಿ ಕೂಡ ಕರ್ತನಾದ ದೇವರು ನಮ್ಮನ್ನು ಸುರಕ್ಷಿತವಾಗಿಸಿದ್ದಾನೆ. ಆದುದರಿಂದ ನಾವು ಆತನಿಗೆ ವಂದನೆಗಳನ್ನು ಸಲ್ಲಿಸಬೇಕಾಗಿದೆ.

ನಮ್ಮ ಸೇವಾಕ್ಷೇತ್ರಗಳಲ್ಲಿ ಸಭೆಗಳನ್ನು ಹಾಗು ವಿಶ್ವಾಸಿಗಳನ್ನು ಕಾಳಜಿ ವಹಿಸುವದರಲ್ಲಿ ತುಂಬಾ ವ್ಯಸ್ತವಾಗಿದ್ದೇವೆ. ಆತನ ಕರೆಯುವಿಕೆಯ ಪ್ರತಿದ್ವನಿಯ ಪ್ರಕಟನೆಗಳು. ಸಂತ ಪೌಲ ಮ್ಯಾಟ್ರಿಕೇಲುಶನ್ ಶಾಲೆ. ನೆಹಮೀಯ ಸತ್ಯವೇದ ಶಾಲೆಗಳು. ಸತ್ಯವೇದಕೋರ್-ಅಂಚೆ ಶಿಕ್ಷಣಗಳು, ಕಾರ್ಯನಿರ್ವಹಣೆ. ಹಣಕಾಸು ಮಂತಾದವುಗಳು. ಹೇಳಿಕೊಳ್ಳಲಾಗದಂತಹ ಪರಿಸ್ಥಿತಿಗಳ ಮಧ್ಯದಲ್ಲಿ, ನಮ್ಮ ದಿನನಿತ್ಯದ ಚಟುವಟಿಕೆಗಳಲ್ಲಿ ದೇವರ ಕೈ ಕೆಲಸ ಮಾಡುವುದನ್ನು ನಾವು ವೀಕ್ಷಿಸುತ್ತಾ ಇದ್ದೇವೆ. ಜೀವನದಲ್ಲಿ ಭಯ ಮತ್ತು ಅಭದ್ರತೆಯಿಂದಾಗಿ ಸಾಂಕ್ರಾಮಿಕ ರೋಗವು ವಿಶ್ವದ ಸಾಮಾನ್ಯ ಜನರ ಮನಸ್ಥಿತಿಗೆ ಪರಿಣಾಮ ಬೀರಿದೆ ಎಂದು ನಾವು ನೋಡುತ್ತೇವೆ. ಹಣಕಾಸಿನ ವಿಷಯದಲ್ಲಿ ನಾವು ಕೂಡ ದೊಡ್ಡ ಸಮಸ್ಯೆಗಳನ್ನು ಎದುರಿಸಿದೆವು. ಆದರೆ ಎಲ್ಲಾಕ್ಕಿಂತ ಹೆಚ್ಚಾಗಿ ನಮ್ಮ ಜೀವ ರಕ್ಷಕನ ಅಚಲವಾದ ಭರವಸವು ಇದಾಗಿದೆ,ಇದಲ್ಲದೆ ದೇವರ ಸಂಕಲ್ಪದ ಮೇರೆಗೆ ಕರೆಯಲ್ಪಟ್ಟು ಆತನನ್ನು ಪ್ರೀತಿಸುವವರ ಹಿತಕ್ಕಾಗಿ ಎಲ್ಲಾ ಕಾರ್ಯಗಳು ಅನುಕೂಲವಾಗುತ್ತವೆ ಎಂದು ನಮಗೆ ಗೊತ್ತಿದೆ (ರೋಮಾ 8:28).

ನೀವು ಒಂದು ವೇಳೆ ಎಂತಹ ಸಮಸ್ಯೆ ಗಳಿಂದ ಹಾದು ಹೋಗುತ್ತಿರಬಹುದು, ನಿಮ್ಮ ಎಲ್ಲಾ ಸಂದರ್ಭಗಳಲ್ಲಿ ನಮ್ಮ ಕರ್ತನಾದ ಯೇಸುಕ್ರಿಸ್ತನು ನಿಮ್ಮೊಂದಿಗಿದ್ದಾನೆ ಎಂದು ದಯವಿಟ್ಟು ತಿಳಿದುಕೊಳ್ಳಿರಿ.

ನಮ್ಮ ಸಭೆಯ ಎಲ್ಲಾ ಚಟುವಟಿಕೆಗಳು ಹಾಗು ಬೇರೆ ಕಾರ್ಯಕ್ರಮಗಳು ಚೆನ್ನಾಗಿ ನಡೆಯುತ್ತಾ ಇವೆ. ನಿಮ್ಮ ಪ್ರಾರ್ಥನೆಗಳು ಮತ್ತು ಸಹಾಯಗಳಿಗಾಗಿ ನಿಮಗೆ ವಂದನೆಗಳು. ದೇವರು ನಿಮ್ಮನ್ನು ಆಶೀರ್ವದಿಸಲಿ!

ನಿಮ್ಮ ಸೇವಕರುಗಳು

**ಪಾಸ್ಟರ್. ಸ್ಯಾಮ್ ಮತ್ತು ಸ್ಯಾಮ್‌ಸನ್**


**CHIEF EDITORS**
Pastor S. Sam Selva Raj
Angeline Selvakumari Henry, M.A., M.Ed.

**MANAGING EDITOR**
Pastor Alex Samson Sam, B.Th.,M.Div.

**ADMINISTRATION**
Bro. N. Prakasam, M.A., General Manager

**EDITORIAL BOARD**
Sis. Jesy Veena Sam
Bro. M. Paulraj, M.A., B.Ed.
Sis. Serena Bevin, M.A., M. Phil., B.Ed.

**Hd. Qrs. CO-ORDINATORS**
Bro. John Rodrigues
Sis. E. Daisy Rani

**ADVISORY BOARD**
Adv. Jose Abraham
Adv. N. Balaji, B.Com., B.L.
Dr. S. Rabinder Boaz, M.S.
Er. C.G.S. Baburao, B.Tech., M.Tech. (DM)
Aud. K. Puratchivendan, M.Com., B.L



**PUBLISHER & PRINTER**
Pastor S. SAM SELVA RAJ
Echo of His Call Printers
10, Mohammed Abdullah 2nd Street
Chepauk, Chennai- 600 005, India.

Phone : (+ 91- 44) 2852 8282, 2852 9293, 2854 7766
Cell : (+91) 98410 71852, 95661 31858
E-mail : sam@echoofhiscall.org
biblecor@yahoo.co.in

**Websites :**
www.echoofhiscall.org
www.echoofhiscall.com



**Our Ministries:** ECHO OF HIS CALL Monthly Magazines (16 languages) · BIBLECOR - Postal Courses (3 languages) · Theological Correspondence Courses (2 languages) · Church Planting · Nehemiah Bible Colleges · Gospel Printing Press · Great Commission Partners · St. Paul's Matriculation School · Crusades · Community Development

ಈ ರೀತಿಯಾಗಿ ಹೇಳಿದಳು' ಮಗನೆ ನಿನ್ನ ಅಂಗಿಯ ಮೇಲೆ ಕೆಲವು ಪದಗಳನ್ನು ಹೊಲಿಯಲು ನನಗೆ ಅವಕಾಶ ಮಾಡಿಕೊಡು. ಎಲ್ಲಾ ಸನ್ನಿವೇಶಗಳಲ್ಲಿ ಈ ಅಂಗಿಯನ್ನು ಧರಿಸಿಕೊಳ್ಳುವುದಕ್ಕೆ ಮರೆಯಬಾರದು. ನಾನು ರಾಜನ ರಕ್ತಕ್ಕೆ ಸೇರಿದವನು ಎಂದು ಆಕೆಯು ಹೊಲಿದಿದ್ದಳು. ಆತನು ಆ ಅಂಗಿಯನ್ನು ಧರಿಸಿ ಕೊಂಡನು. ಸತ್ಯವೇದದಲ್ಲಿ ನಾವು ತಪ್ಪಿಹೋದ ಮಗನ ಬಗ್ಗೆ ಓದುತ್ತೇವೆ. ಆ ಹುಡುಗನು ಎಲ್ಲಾ ಹಣವನ್ನು ಖರ್ಚು ಮಾಡಿದನು, ಆತನ ಆರೋಗ್ಯವು ಮತ್ತು ಆತನು ಸಾಯುವ ಪರಿಸ್ಥಿತಿಯಲ್ಲಿದ್ದನು. ಆ ಸಮಯದಲ್ಲಿ ಅವನ ಅಂಗಿಯ ಮೇಲೆ ಹೊಲಿದ ಪದಗಳು ಅವನೊಂದಿಗೆ ಮಾತನಾಡಲು ಪ್ರಾರಂಭಿಸಿದವು. ನಾನು ರಾಜನ ರಕ್ತಕ್ಕೆ ಸೇರಿದ ಎಂಬ ಪದಗಳು ಅವನ ಹೃದಯವನ್ನು ಆಳವಾಗಿ ಮುಟ್ಟಿದವು. ತದನಂತರ, ತನ್ನ ಅರಿವಿಗೆ ಬಂದು ಮತ್ತು ನಾನು ಯಾಕೆ ಇಂತಹ ಅಪವಿತ್ರ ಜೀವಿತವನ್ನು ನಡೆಸಬೇಕೆಂದು ಆಲೋಚನೆ ಮಾಡುವದಕ್ಕೆ ಆರಂಭಿಸಿದನು. ಕೊನೆಯದಾಗಿ, ಆತನು ತನ್ನ ತಂದೆತಾಯಿಗಳನ್ನು ಹುಡುಕುವುದಕ್ಕೆ ಹೋದನು. ತಂದೆತಾಯಿಗಳು ಆತನನ್ನು ನೋಡುವುದರಿಂದ ಅವರು ಪ್ರೀತಿಯಿಂದ ಅಪ್ಪುಗೆಯನ್ನು ಮಾಡಿ ಮತ್ತು ಆತನು ಆ ಕುಟುಂಬಕ್ಕೆ ಸೇರಿಕೊಂಡನು.

ಯಾವಾಗ ಎಜ್ರನು ಬ್ಯಾಬಿಲೋನ್‌ನಿಂದ ಯೆರುಸೇಲಮುಗೆ ಬಂದಾನೋ, ಆತನು ಇಸ್ರಾಯೇಲ್ಯರ ಪರಿಸ್ಥಿತಿಯನ್ನು ಗಮನಿಸಿದನು. ದೇವಕುಲವು ಅನ್ಯದೇಶಗಳವರೊಡನೆ ಮಿಶ್ರವಾಗಿದ್ದನು ಆತನು ನೋಡಿದನು (ಎಜ್ರ 9:2).

ಪ್ರೀತಿಯ ದೇವಮಕ್ಕಳೆ, ನೀವು ಪರಲೋಕ ತಂದೆಯ ಮಕ್ಕಳು ಎಂಬ ನಿಖರವಾದ ಸಂಗತಿಯನ್ನು ಮರೆತುಬಿಟ್ಟು ಮತ್ತು ಕೆಟ್ಟ ಪಾಪದಲ್ಲಿ ಜೀವಿಸುತ್ತಾ ಇದ್ದೀರಿ. ನೀವು ಕೆಲವು ಪಾಪಗಳನ್ನು ಗುಪ್ತವಾಗಿ ಮಾಡುತ್ತಾ ಇರಬಹುದು. ಯಾಕೆ ನೀವು ಈಗ ಸಭೆಯಲ್ಲಿ ಇದ್ದೀರಿ? ನೀನು ಇನ್ನೂ ನಿನ್ನ ತಾಯಿಯ ಗರ್ಭದಲ್ಲಿರುವಾಗ ನನಗೆ ನೀನು ಗೊತ್ತು ಮತ್ತು ನೀನು ಈ ಸಭೆಗೆ ಬರಬೇಕೆಂದು ದೇವರು ಹೇಳುತ್ತಾನೆ.

ಹೌದು ಪ್ರಿಯರೇ, ಈ ಲೋಕ ಸೃಷ್ಟಿ ಯಾಗುವುದಕ್ಕೆ ಮುಂಚೆ ನಮ್ಮ ಕರ್ತನಾದ ದೇವರು ನಮ್ಮನ್ನು ಆರಿಸಿಕೊಂಡಿದ್ದಾನೆ. ಆದುದರಿಂದ, ನಿಮ್ಮನ್ನು ನೀವು ಕಡಿಮೆ ಮಾಡಿಕೊಳ್ಳಬೇಡಿರಿ. ನೀವು ವಿಶೇಶವಾದವರು!. ದಾವಿದನು ಹೇಳಿದ ಹಾಗೆ ನೀವು ಸಹ ದೇವರಿಗೆ ಹೇಳಿರಿ. ಯೆಹೋವನೇ ನನ್ನ ಪಾಲು ನೀನೇ (ಕೀರ್ತನೆ 119:57). ಕರ್ತನು ನಿಮ್ಮನ್ನು ನೋಡಿ ಹೀಗೆ ಹೇಳುತ್ತಾನೆ ನೀನು ನನ್ನವನು. ಈ ಲೋಕವು ನಿಮ್ಮನ್ನು ಕೆಟ್ಟದಾಗಿ ನಡೆಸಿಕೊಳ್ಳಬಹುದು; ನಿಮಗೆ ನೋವನ್ನುಂಟು ಮಾಡಬಹುದು. ಆದರೆ ನಿಮ್ಮನ್ನು ಕರೆದಾತನು ನಂಬಿಗಸ್ತನಾಗಿದ್ದಾನೆ. ಆತನು ಒಳ್ಳೆಯ ದೇವರು ಮತ್ತು ನಂಬಿಗಸ್ತನಾಗಿದ್ದಾನೆ!

ಈ ಜಗತ್ತನ್ನು ಸೃಷ್ಟಿಸಿದ ದೇವರಾದ ಕರ್ತನು ನಿಮ್ಮನ್ನು ಹೆಸರಿನಿಂದ ಕರೆದಿದ್ದಾನೆ. ನಿಮ್ಮ ಪೋಷಕರು ನಿಮ್ಮನ್ನು ಹೆಸರಿಸಿರಬಹುದು. ಆದರೆ ನಿಮ್ಮ ತಾಯಿಯ ಗರ್ಭದಲ್ಲಿದ್ದಾಗ ನಿಮ್ಮನ್ನು ಆರಿಸಿಕೊಂಡ ದೇವರಾದ ಕರ್ತನು ಕೊಟ್ಟ ಹೆಸರು. ಒಂದು ಸಾರಿ ನಾನು ನನ್ನ ತಾಯಿಯನ್ನು ಕೇಳಿದೆನು, ನೀವು ನನ್ನನ್ನು ಸ್ಯಾಮ್ ಸೆಲ್ವರಾಜ್ ಎಂದು ಯಾಕೆ ಹೆಸರಿಸಿದ್ದೀರಿ? ನಾನು ಕುಟುಂಬಕ್ಕೆ ಆಸ್ತಿ ಎಂದು ಅವರು ನನಗೆ ಹೇಳಿದರು! ಹೌದು, ಸಮುವೇಲನು ದೊಡ್ಡ ಪ್ರವಾದಿಯಾಗಿದ್ದನು. ಸೆಲ್ವರಾಜ್ ಅರ್ಥ ಎಲ್ಲಾ ಸಂಪತ್ತಿನ ರಾಜ. ಅವರು ನನಗೆ ಇಂತಹ ಒಳ್ಳೆಯ ಹೆಸರನ್ನು ಇಟ್ಟಿದ್ದಕ್ಕಾಗಿ ನನಗೆ ಸಂತೋಷ ವಾಯಿತು. ಒಬ್ಬ ಹಿರಿಯ ಭೋದಕರು ಹೀಗೆ ಹೇಳಿದರು, ನಾವು ತಾಯಿಯ ಗರ್ಭದಲ್ಲಿದ್ದಾಗ ನಮ್ಮ ಕರ್ತನಾದ ದೇವರು ನಮ್ಮ ಪ್ರತಿಯೊಬ್ಬರಿಗೂ ಹೆಸರಿಟ್ಟಿದ್ದಾನೆ. ಅದುದರಿಂದ, ಕರ್ತನಾದ ದೇವರು ನನಗೆ ಸ್ಯಾಮ್ ಸೆಲ್ವರಾಜ್ ಎಂದು ಹೆಸರಿಟ್ಟಿದ್ದಾನೆಂದು ನನಗೆ ಅರ್ಥವಾಯಿತು. ದೇವರಾದ ಕರ್ತನು ನಿಮಗೆ ಹೆಸರಿಟ್ಟಿದ್ದಾನೆ.

ಕರ್ತನ ದೂತನು ಯೇಸೇಫನಿಗೆ ಕಾಣಿಸಿಕೊಂಡು ಈ ರೀತಿಯಾಗಿ ಹೇಳಿದನು. ಮರಿಯಳು ಒಬ್ಬ ಮಗನನ್ನು ಹಡೆಯುವಳು; ನೀನು ಆತನಿಗೆ ಯೇಸು ಎಂದು ಹೆಸರಿಡಬೇಕು; ಯಾಕೆಂದರೆ ಆತನೇ ತನ್ನ ಜನರನ್ನು ಅವರ ಪಾಪಗಳಿಂದ ಬಿಡಿಸಿಕಾಯುವನು ಅಂದನು (ಮತ್ತಾಯ 1:21). ಯೇಸುವಿನ ಅರ್ಥವು ಆತನು ತನ್ನ ಜನರನ್ನು ಆವರ ಪಾಪಗಳಿಂದ ಬಿಡಿಸಿಕಾಯುವನು. ನಾವು ಲೂಕ 1:13 ಗಮನಿಸುತ್ತೇವೆ. ಕರ್ತನ ದೂತನು ಜೆಕರ್ಯನಿಗೆ ಕಾಣಿಸಿಕೊಂಡು ಆತನ ಮಗನಿಗೆ ಯೋಹಾನ ಎಂದು ಹೆಸರಿಡಬೇಕೆಂದು ಹೇಳಿದನು.

ಆದುದರಿಂದ, ನೀವು ತಂದೆತಾಯಿಗಳು ನಿಮ್ಮ ಮಕ್ಕಳಿಗೆ ಹೆಸರು ಇಡುವಾಗ ಅವರು ಸರ್ವಶಕ್ತನಾದ ದೇವರನ್ನು ಕೇಳಬೇಕು ಮತ್ತು ನಿಮ್ಮ ಮಕ್ಕಳಿಗೆ ದೇವರು ಕೇಳಿದಂತೆ ಹೆಸರಿಸಬೇಕು. ನಿಮ್ಮ ಮನಸ್ಸಿಗೆ ಅತನು ಮಾತನಾಡುತ್ತಾನೆ! ನಿಮ್ಮ ಮಕ್ಕಳ ಹೆಸರುಗಳು ಪರಲೋಕದ ಪುಸ್ತಕದಲ್ಲಿ ಬರೆಯಲ್ಪಟ್ಟಿವೆ!

ಕರ್ತನಾದ ದೇವರು ನಮ್ಮೆಲ್ಲರನ್ನೂ ನಮ್ಮ ಹೆಸರಿನಿಂದ ಕರೆಯುವ ದಿನವು ಬರುತ್ತದೆ. ನಮ್ಮೆಲ್ಲರ ಹೆಸರುಗಳು ದೇವರ ಪುಸ್ತಕದಲ್ಲಿ ಬರೆಯಲ್ಪಟ್ಟಿವೆ. ನೀವು ವಿಶೇಶವಾದವರು. ಕರ್ತನಾದ ದೇವರು ನಿನಗೆ ಹೇಳುತ್ತಾನೆ ನೀನು ಜಲರಾಶಿಯನ್ನು ಹಾದು ಹೋಗುವಾಗ ನಾನು ನಿನ್ನ ಸಂಗಡ ಇರುವನು; ನದಿಗಳನ್ನು ದಾಟುವಾಗ ಅವು ನಿನ್ನನ್ನು ಮುಣುಗಿಸವು; ಉರಿಯಲ್ಲಿ ನಡೆಯುವಾಗ ನೀನು ಕಂದದಿರುವಿ, ಜ್ವಾಲೆಯು ನಿನ್ನನ್ನು ದಹಿಸದು (ಯೆಶಾಯ 43:2). ಹೌದು, ಸಮಸ್ಯೆಗಳು, ಕಷ್ಟಗಳು ಮತ್ತು ದುಃಖಗಳು ನಿಮಗೆ ನೋವನ್ನುಂಟು ಮಾಡುವುದಿಲ್ಲ. ನೀವು ಹೀಗೆ ಆಲೋಚಿಸಬಹುದು, ಓಹ್, ನಾನು ಕಷ್ಟದ ಸಮಯದಲ್ಲಿ ವಾಸಿಸುತ್ತಿದ್ದೇನೆ ಮತ್ತು ನಾನು ಈ ಭಯಾನಕ ಕಾಯಿಲೆಯಿಂದ ಬಳಲುತ್ತಿದ್ದೇನೆ. ಆದರೆ ನಿಮ್ಮನ್ನು ಕರೆದ ದೇವರಾದ ಕರ್ತನು ಈ ರೀತಿಯಾಗಿ ಹೇಳುತ್ತಾನೆ, ನೀನು ನದಿಗಳನ್ನು ದಾಟಿ ಹೋಗುವಾಗ, ನಾನು ನಿನ್ನ ಸಂಗಡ ಇರುತ್ತೇನೆ. ಕೇಳಿರಿ, ಎಲ್ಲರಂತೆ, ನೀವುಗಳು ಕೂಡ ನೀರುಗಳನ್ನು ಮತ್ತು ನದಿಗಳನ್ನು ಹಾದು ಹೋಗುತ್ತಾ ಇರಬಹುದು. ನೀವು ಬೆಂಕಿಯಲ್ಲಿ ಹಾದು ಹೋಗುತ್ತಾ ಇರಬಹುದು. ಆದರೆ, ಅವುಗಳಿಂದ ನಿಮ್ಮನ್ನು ಹಾನಿ ಮಾಡಲು ದೇವರು ಅನುಮತಿಸುವುದಿಲ್ಲ.

ನಂತರ, ನಾವು ಯೆಶಾಯ 43:3ನ್ನು ಓದುವಾಗ, ಯೆಹೋವನೆಂಬ ನಾನು ನಿನ್ನ ದೇವರಾಗಿದ್ದೇನಷ್ಟೆ, ಇಸ್ರಾಯೇಲ್ಯರ ಸದಮಲ ಸ್ವಾಮಿಯಾದ ನಾನು ನಿನ್ನ ರಕ್ಷಕನು,ಇಗುಪ್ತವನ್ನು ನಿನ್ನ ವಿಮೋಚನೆಗೆ ಈಡು ಮಾಡಿದ್ದೇನೆ, ನಿನಗೆ ಬದಲಾಗಿ ಕೂಷ್ ಮತ್ತು ಸೆಬಾ ಸೀಮೆಗಳನ್ನು ಕೊಟ್ಟಿದ್ದೇನೆ. ನಾವು ದೇವರ ಮಕ್ಕಳಾಗಿದ್ದೇವೆ ಮತ್ತು ಆದುದರಿಂದ ನಾವು ಎಂದಿಗೂ ಸುಳ್ಳಿನಲ್ಲಿ ಬದುಕುವುದಿಲ್ಲ. ನಾವು ಸಾಲದಲ್ಲಿ ಮುಳುಗಿ ಹೋಗುವುದಿಲ್ಲ. ನಾವು ಯಾಕೆ ದೇವಾಲಯಕ್ಕೆ ಬರುತ್ತೇವೆ? ದೇವರಿಗೆ ಕಾಣಿಕೆ ಕೊಡುವ ಉದ್ದೇಶವೇನು, ಪ್ರಾರ್ಥನೆ, ಉಪವಾಸ? ಇವುಗಳೆಲ್ಲವು ನಮ್ಮನ್ನು ಕ್ರಿಸ್ತನ ಹತ್ತಿರಕ್ಕೆ ಕರೆದುಕೊಂಡು ಹೋಗುತ್ತೇವೆ! ದೇವರನ್ನು ಪ್ರೀತಿಸುವವರಿಗೆ ಎಲ್ಲಾ ಸಂಪತ್ತು ಮತ್ತು ಸೌಕರ್ಯಗಳು ಬರುತ್ತವೆ. ನಾವು ಮತ್ತಾಯ 6:33ರನ್ನು ಓದುವಾಗ, ಹೀಗಿರುವದರಿಂದ, ನೀವು ಮೊದಲು ದೇವರ ರಾಜ್ಯಕ್ಕಾಗಿಯೂ ನೀತಿಗಾಗಿಯೂ ತವಕಪಡಿರಿ. ಇವುಗಳು ಕೂಡ ಅವೆಲ್ಲವೂ ನಿಮಗೆ ದೊರಕುವವು.

ನಾನು ದೀನತೆಯ ಆರಂಭದಿಂದ ಬಂದವ ನಾಗಿದ್ದೇನೆ, ದೇವರು ಈ ರೀತಿಯಾಗಿ ಈಗ ನನ್ನನ್ನು ಆಶೀರ್ವದಿಸಿದ್ದಾನೆ. ಆತನು ಮೊದಲೆ ನಿರ್ಧರಿಸಿದ್ದಾನೆ, ನಮ್ಮ ಹೆಸರಿಡುದು ನಮ್ಮನ್ನು ಕರೆದಿದ್ದಾನೆ ಮತ್ತು ನಾವು ಆತನನ್ನು ಗಟ್ಟಿಯಾಗಿ ಹಿಡಿದುಕೊಳ್ಳಬೇಕಾಗಿದೆ. ಆತನು ನಮಗೆ ಆತನು ಇಗುಪ್ತ ಮತ್ತು ಸೆಬಾ ಸುಲಿಗೆಯನ್ನು ಕೊಡುವನು!

**ಆತನ ಕರೆಯ ಸೇವೆಗಳು, ಮತ್ತು ಆತನ ಕರೆಯ ಪತ್ರಿಕೆಯು ಚಂದಾಗಾರಿಕೆಯಿಂದ ಬೆಂಬಲಿತವಾಗಿದೆ ಮತ್ತು ಓದುಗರಿಂದ ನಿಮ್ಮಂತಹ ಆತ್ಮೀಯ ಸ್ನೇಹಿತರಿಂದ ಬರುವ ಉಚಿತವಾದ ಕಾಣಿಕೆಗಳಿಂದ. (ಸಂತೋಷವಾಗಿ ಕೊಡುವವನ ಮೇಲೆ ದೇವರಿಗೆ ಪ್ರೀತಿವುಂಟು (2 ಕೊರಿಂಥ 9:7) ಎಲ್ಲಾ ವಿಧಾನಗಳಿಂದ...ಎಲ್ಲಾ ವೆಚ್ಚಗಳು...ಯಾವುದೇ ರೀತಿಯಲ್ಲಿ... ಎಲ್ಲಾ ರೀತಿಯಲ್ಲಿ... ಕೆಲವರನ್ನು ರಕ್ಷಿಸುವದು (1 ಕೊರಿಂಥ 9:22)**

ನಾವು ಅನೇಕ ಜನರ ದುರಂತ ಅಂತ್ಯವನ್ನು ನೋಡಿದ್ದೇವೆ. ಆದರೂ ಅವರು ಬಹಳ ಜನಪ್ರಿಯ ವ್ಯಕ್ತಿಗಳು ಮತ್ತು ಶ್ರೀಮಂತರಾಗಿ ವಾಸಿಸುತ್ತಿದ್ದರು, ಅವರು ದೇವರಿಲ್ಲದೆ ಜೀವಿಸದ್ದರಿಂದ ಅವರು ದುರಂತ ಅಂತ್ಯವನ್ನು ಕಂಡರು. ದೇವರು ತಿರುಗಿ ಈ ರೀತಿಯಾಗಿ ಹೇಳುತ್ತಾನೆ. ನೀನು ನನ್ನ ದೃಷ್ಟಿಯಲ್ಲಿ ಅಮೂಲ್ಯನೂ ಮಾನ್ಯನೂ ಪ್ರಿಯನೂ ಆಗಿರುವುದರಿಂದ ನಾನು ನಿನಗೆ ಬದಲಾಗಿ ಮನುಷ್ಯರನ್ನೂ ನಿನ್ನ ಪ್ರಾಣಕ್ಕೆ ಪ್ರತಿಯಾಗಿ ಜನಾಂಗಗಳನ್ನೂ ಕೊಡುವೆನು (ಯೆಶಾಯ 43:4). ನೀನು ನನ್ನ ದೃಷ್ಟಿಯಲ್ಲಿ ಅಮೂಲ್ಯನು, ನೀನು ನನ್ನ ದೃಷ್ಟಿಯಲ್ಲಿ ಅಮೂಲ್ಯನು!

ಪ್ರೀತಿಯ ಸಹೋದರ/ಸಹೋದರಿಯರೆ, ನೀನು ಯಾರೆ ಆಗಿರಲಿ, ಜೀವಿಸುವ ದೇವರು ಹೇಳುತ್ತಾನೆ, ನಿನ್ನ ಪ್ರಸ್ತುತ ಕಷ್ಟದ ಸ್ಥಿತಿಯ ಬಗ್ಗೆ ಚಿಂತಿಸಬೇಡಿ. ನೀವು ಕೆಲವು ಸಮಸ್ಯೆಗಳಲ್ಲಿ ಇರಬಹುದು, ಅಥವಾ ಸಾಲದಲ್ಲಿ, ಕಾಯಿಲೆಯಲ್ಲಿ ನರಳುತ್ತಿರಬಹುದು, ಅಥವಾ ಕೆಲವು ನೋವುನಿಂದ ಜೀವಿಸುತ್ತಿರಬಹುದು, ಅಥವಾ ಹಸಿವೆಯಿಂದ ಇರಬಹುದು, ಮರುದಿನ ನೀವು ಎದುರಿಸಬಹುದಾದ ಸಮಸ್ಯೆಗಳ ಬಗ್ಗೆ ನಿದ್ದೆಯಿಲ್ಲದೆ ಆಲೋಚನೆ ಮಾಡುತ್ತಿರಬಹುದು. ಆದರೆ ಕರ್ತನು ಹೇಳುತ್ತಾನೆ, ನೀನು ನನ್ನ ದೃಷ್ಟಿಯಲ್ಲಿ ಅಮೂಲ್ಯನಾಗಿರುವುದರಿಂದ, ನಿನ್ನನ್ನು ಗೌರವಿಸಲಾಗಿದೆ ಮತ್ತು ನಾನು ನಿನ್ನನ್ನು ಪ್ರೀತಿಸುತ್ತೇನೆ. ಆದುದರಿಂದ ನಾನು ನಿನಗಾಗಿ ಮನುಷ್ಯರನ್ನು ಕೊಡುತ್ತೇನೆ ಮತ್ತು ನಿನ್ನ ಜೀವನಕ್ಕಾಗಿ ಜನರನ್ನು ಕೊಡುತ್ತೇನೆ. ಪ್ರೀತಿಯ ದೇವಮಗುವೆ, ಲೋಕವು ನಿನ್ನನ್ನು ಸಾಲಗಾರನಾಗಿ ನೋಡಲಿ, ಅಸ್ವಸ್ಥ ವ್ಯಕ್ತಿ, ಬಡವ ಅಥವಾ ಅನಕ್ಷರಸ್ಥ. ಆದರೆ ದೇವರು ಹೇಳುತ್ತಾನೆ, ನೀನು ನನ್ನ ದೃಷ್ಟಿಯಲ್ಲಿ ಅಮೂಲ್ಯ ನಾಗಿರುವುದರಿಂದ, ನಿನ್ನನ್ನು ಗೌರವಿಸಲಾಗಿದೆ.

ಒಂದು ಬಸ್ಸ್‌ನ ನಿರ್ವಾಹಕ ನಿನ್ನನ್ನು ಒಬ್ಬ ಸಾಮಾನ್ಯ ಪ್ರಯಾಣಿಕನಾಗಿ ನೋಡಬಹುದು! ನಿಮ್ಮ ವೈದ್ಯನು ನಿಮ್ಮನ್ನು ಒಬ್ಬ ರೋಗಿಯನ್ನಾಗಿ ನೋಡ ಬಹುದು!! ಆದರೆ ಕರ್ತನಾದ ಯೇಸು ಹೇಳುತ್ತಾನೆ, ನೀನು ನನ್ನ ಅಮೂಲ್ಯ ಮಗನು, ನೀನು ನನ್ನ ಅಮೂಲ್ಯ ಮಗಳು.

ಈಗಲೇ ನಿಮ್ಮನ್ನು ಕರ್ತನಿಗೆ ಒಪ್ಪಿಸಿರಿ. ನಮ್ಮ ದೇವರಾದ ಕರ್ತನು ನಿಮ್ಮನ್ನು ಪರಿಶುದ್ಧ ಬಂಗಾರವನ್ನಾಗಿ ಮಾರ್ಪಡಿಸುತ್ತಾನೆ.ಕೆಲವು ಜನರು ತಮ್ಮ ದೈಹಿಕ ಶಕ್ತಿಯು ಕುಂದಿಹೋದಾಗ ತಮ್ಮನ್ನು ಒಪ್ಪಿಸಿಕೊಡುತ್ತಾರೆ. ಅವರು ತಮ್ಮ ಅಮೂಲ್ಯ ವರ್ಷಗಳನ್ನು ಕಳೆದುಕೊಳ್ಳುತ್ತಾರೆ. ಯಾವಾಗ ನೀನು ಅರೋಗ್ಯ ಮತ್ತು ಶಕ್ತಿ ಇರುವಾಗ ದೇವರ ರಾಜ್ಯವನ್ನು ಹುಡುಕ ಬೇಕಾಗಿದೆ. ನೀನು ಕಾಲಿಡುವ ಜಾಗವು ನಿನಗೆ ಸ್ವಂತವಾಗುವುದು. ಜ್ಞಾನೋಕ್ತಿಗಳು 28:20 ಹೇಳುತ್ತದೆ, ನಂಬಿಗಸ್ತನು ಆಶೀರ್ವಾದ ಪೂರ್ಣನಾಗುವನು.

ಇದರೊಂದಿಗೆ ನಾನು ಮುಗಿಸುತ್ತೇನೆ, ಒಮ್ಮೆ ನಾನು ನನ್ನ ಸಭಾಪಾಲಕರಾದ ಸ್ಯಾಮ್ ಸುಂದರಂ ರವರನ್ನು ಪುರಾಸಕ್ಕಂನಿಂದ (ಚೆನ್ನೈ) 15 ಕಿ.ಮೀ ದೂರದಲ್ಲಿರುವ ನನ್ನ ಮನೆಗೆ ಕರೆದೊಯ್ಯುತ್ತಿದ್ದೆ. ನನ್ನ ಹತ್ತಿರ ಕೇವಲ 3 ರೂಪಾಯಿ 20 ಪೈಸೆ ಇತ್ತು. ಯಾವಾಗ ಟ್ಯಾಕ್ಸಿಯು ಎಗ್ಮೊರಗೆ ಬಂದಿತು, ಮೀಟರ್ ತೋರಿಸುತ್ತಿತ್ತು 3 ರೂಪಾಯಿ 20 ಪೈಸೆ ಎಂದು. ಅದು ಇನ್ನು ಕೇವಲ ಅರ್ಧದಾರಿಯಾಗಿತ್ತು. ನನ್ನ ಪ್ರೀತಿಯ ಸಭಾಪಾಲಕರನ್ನು ಹೊರಗೆ ಹೆಜ್ಜೆ ಹಾಕಲು ಮತ್ತು ಅವರನ್ನು ನನ್ನ ಮನೆಗೆ ಕಾಲುದಾರಿಯಲ್ಲಿ ನಡೆಯುವಂತೆ ಕೇಳಬಹುದೇ? ನಾನು ಅಳುತ್ತಾ ಇದ್ದೆ ಮತ್ತು ನನ್ನ ಹೃದಯದಲ್ಲಿ ಪ್ರಾರ್ಥನೆ ಮಾಡುತ್ತಾ ಇದ್ದೆ. ಕಾರ್ ಬಹಳ ವೇಗವಾಗಿ ಹೋಗುತ್ತಿತ್ತು. ಆದರೆ ಆಶ್ಚರ್ಯವೇನೆಂದರೆ ಮೀಟರ್ ಕಾರ್ಯ ಮಾಡುವುದನ್ನು ನಿಲ್ಲಿಸಿ 3 ರೂಪಾಯಿ 20 ಪೈಸೆಗೆ ನಿಂತ್ತಿತ್ತು. ನಾವು ನನ್ನ ಮನೆಗೆ ತಲುಪುವವರೆಗೆ ಅದು ಅದೇ ಮೊತ್ತವನ್ನು ತೋರಿಸಿತು! ಚಾಲಕನು ಮೀಟರ್‌ನ್ನು ನೋಡಿ ಮತ್ತು ನಷ್ಟವಾಯಿತು ಎಂದು ಹೇಳಿದನು! ಆತನು ಆಶ್ಚರ್ಯನಾಗಿ ಹೇಗೆ ಅದು ಕೇವಲ 3 ರೂಪಾಯಿ 20 ಪೈಸೆಯನ್ನು ತೋರಿಸಿತು. ಕಾರು ಇಷ್ಟು ದೂರ ಪ್ರಯಾಣ ಮಾಡಿದ್ಯಾಗೂ. ಮೀಟರ್ ಎಗ್ಮೋರ್‌ನಿಂದ ಕಾರ್ಯ ಮಾಡುವದನ್ನು ನಿಲ್ಲಿಸಿದೆ ಎಂದು ನಾನು ಚಾಲಕನಿಗೆ ಹೇಳಿದೆನು. ಚಿಂತಿಸಬೇಡ, ನಾನು ಯಾವುದೇ ಶುಲ್ಕವನ್ನು ನೀಡುತ್ತೇನೆ. ಆದರೆ ನನ್ನ ಹತ್ತಿರ ಈಗ ಕೇವಲ 3 ರೂಪಾಯಿ 20 ಪೈಸೆ ಇದೆ. ನಾನು ನನ್ನ ಕೈಗಡಿಯಾರವನ್ನು ಬಿಚ್ಚಿ ಆ ಚಾಲಕನಿಗೆ ಕೊಟ್ಟು ನಾನು ಚೈನ್ನೈನಲ್ಲಿ ವಾಸಿಸುತ್ತೇನೆಂದು ಹೇಳಿದೆನು, ನಾನು ನಿನ್ನನ್ನು ಇನ್ನೊಂದು ಸಾರಿ ಬೇಟಿಯಾದಾಗ ಬಾಕಿ ಹಣವನ್ನು ಕೊಟ್ಟು ನನ್ನ ಕೈಗಡಿಯಾರವನ್ನು ತೆಗೆದುಕೊಳ್ಳುತ್ತೇನೆ ಎಂದು ಹೇಳಿದೆನು. ಒಟ್ಟು ಶುಲ್ಕ ಎಷ್ಟು ಎಂದು ನಾನು ಅವನನ್ನು ಕೇಳಿದೆ.

ಟ್ಯಾಕ್ಸಿಯ ಚಾಲಕನು ನನ್ನ ಕೈಗಡಿಯಾರವನ್ನು ತೆಗೆದುಕೊಳ್ಳಲಿಲ್ಲ. ನೀನು ಕ್ರೈಸ್ತನಾ ಎಂದು ನನ್ನನ್ನು ಕೇಳಿದನು ಆತನು ನನಗೆ ನೀರನ್ನು ಕೊಡಿರಿ ಎಂದು ಕೇಳಿದನು, ಕುಡಿದು 3 ರೂಪಾಯಿ 20 ಪೈಸೆಯನ್ನು ತೆಗೆದುಕೊಳ್ಳದೆ ಹೋದನು. ನಾನು ನನ್ನ ಕರ್ತನಾದ ದೇವರನ್ನು ಪ್ರೀತಿಸಿದ್ದರಿಂದ, ಆತನು ಅದ್ಬುತ ಕಾರ್ಯವನ್ನು ನನಗೆ ಮಾಡಿದನು. ಕೆಲವು ವರ್ಷಗಳ ನಂತರ ಆ ಚಾಲಕನು ನನ್ನ ಮನೆಗೆ ಬಂದನು, ಆ ಸಮಯದಲ್ಲಿ ನನ್ನ ಮನೆಯ ಮುಂದೆ ನಿಂತಿರುವ ಸುಂದರವಾದ ಅಂಬ್ಯಾಸಡರ್ ಕಾರ್ ನಿಂತಿರುವುದುನ್ನು ನೋಡಿದನು. ಅವನು ಆಶ್ಚರ್ಯದಿಂದ ನನ್ನನ್ನು ಕೇಳಿದನು. ಯಾವಾಗ ನಿಮ್ಮ ಹತ್ತಿರ ಇಷ್ಟು ಸುಂದರವಾದ ಕಾರ್ ಇರುವಾಗ ನನ್ನ ಟ್ಯಾಕ್ಸಿಯಲ್ಲಿ ಯಾಕೆ ಪ್ರಯಾಣ ಮಾಡುತ್ತೀರಿ? ನಾನು ಬಹಳ ಬಡವನಾಗಿದ್ದೆ ಆ ಸಮಯದಲ್ಲಿ ಎಂದು ಆತನಿಗೆ ಹೇಳಿದೆನು. ಆ ಸಮಯದಲ್ಲಿ ನನ್ನ ಹತ್ತಿರ 3 ರೂಪಾಯಿ 20 ಪೈಸೆ ಬಿಟ್ಟು ಬೇರೆ ಇರಲಿಲ್ಲ. ಈಗ ದೇವರು ನನ್ನನ್ನು ಆಶೀರ್ವದಿಸಿ ಮತ್ತು ನನ್ನನ್ನು ಮೇಲೆತ್ತಿದ್ದಾನೆ.

ನಂಬಿಗಸ್ತನು ಮನುಷ್ಯನು ಆಶೀರ್ವಾದ ದಿಂದ ತುಂಬಿರುತ್ತಾನೆ. ನಾನು ಟ್ಯಾಕ್ಸಿಗೆ ಹಣ ಕೊಡದೆ ಸಾಧ್ಯವಾಗದೆ ಇದ್ದಾಗ ಕರ್ತನಾದ ದೇವರು ನನ್ನನ್ನು ಹೊಸ ಕಾರಿನ ಮಾಲೀಕನನ್ನಾಗಿ ಮಾಡಿದ್ದಾನೆ. ಸತ್ಯವೇದವು ಹೇಳುತ್ತದೆ, ಆದುದರಿಂದ ನಾನು ನಿನಗಾಗಿ ಜನರನ್ನು ಕೊಡುತ್ತೇನೆ ಮತ್ತು ನಿನ್ನ ಜೀವಿತಕ್ಕೆ ಜನರನ್ನು ಕೊಡುತ್ತೇನೆ. ದೇವರು ಹೇಳುತ್ತಾನೆ, ನೀನು ನನ್ನ ದೃಷ್ಟಿಯಲ್ಲಿ ಅಮೂಲ್ಯನಾಗಿರುವದರಿಂದ, ನಾನು ನಿನ್ನನ್ನು ಗೌರವಿಸುತ್ತೇನೆ.

ದೇವರು ನಿನಗಾಗಿ ಅನೇಕ ಒಳ್ಳೆಯ ಜನರನ್ನು ಕಳುಹಿಸುತ್ತಾನೆ. ನಿನ್ನ ಆರೋಗ್ಯ ಮತ್ತು ಸಂತೋಷವನ್ನು ವಿಚಾರಿಸಲು ನೀನು ಜನರನ್ನು ಹೊಂದಿರುತ್ತಿ. ನಿನ್ನ ಕಷ್ಟದ ಕೈಯಿಂದ, ಅನೇಕ ಜನರಿಗೆ ಉಣ ಬಡಿಸುತ್ತಿ. ನಿನ್ನ ಬಾಯಿ ಮಾತುಗಳಿಂದ ಅನೇಕ ಜನರು ಸಂತೈಸುವಿಕೆ ಯನ್ನು ಹೊಂದುತ್ತಾರೆ. ದಾಸನ ಕಣ್ಣುಗಳು ಯಾಜಮಾನನ ಮುಖದಿಂದ ನಿರೀಕ್ಷಿಸುವವ ಪ್ರಕಾರ, ಅನೇಕ ಜನರು ನಿನ್ನ ಮುಖವನ್ನು ನೋಡುತ್ತಾರೆ. ದೇವರು ನಿಮ್ಮನ್ನು ತಲೆಯಾಗಿ ಮಾಡುತ್ತಾನೆ ಹೊರತು ಬಾಲವನ್ನಾಗಿ ಅಲ್ಲ. ಆತನು ನಿಮ್ಮನ್ನು ನಿರಾಸೆ ಮಾಡುವುದಿಲ್ಲ ಆದರೆ ನೀವು ಎತ್ತರಕ್ಕೆ ಹೋಗುತ್ತೀರಿ. ನಿನಗಾಗಿ ಜನರನ್ನು ಮತ್ತು ನಿನ್ನ ಜೀವನಕ್ಕೆ ಜನರನ್ನು ಕೊಡುತ್ತಾನೆ. ನಾನು ಯೌವ್ವನಸ್ಥನಾಗಿದ್ದಾಗ ನನ್ನನ್ನು ನಾನು ಪರಿಶುದ್ದನಾಗಿಟ್ಟು ಕೊಂಡಿದ್ದರಿಂದ, ಈಗ ದೇವರು ನನ್ನನ್ನು ಆಶೀರ್ವದಿಸಿದ್ದಾನೆ.

ನೀನು ದೇವರಿಂದ ಮೊದಲೇ ನಿರ್ಧರಿ ಸಲ್ಪಟ್ಟಿದ್ದೀರಿ ಮತ್ತು ಆತನಿಂದ ಕರೆಯಲ್ಪಟ್ಟಿದ್ದೀರಿ. ನೀನು ರಾಜ ಮನೆತನಕ್ಕೆ ಸೇರಿದವರು ಎಂದು ತೋರಿಸಲು ಆತನು ನಿನ್ನ ಮೇಲೆ ಒಂದು ಚಿಹ್ನೆಯನ್ನು ಹೊಂದಿದ್ದಾನೆ.

ಜೂನ್ 22, 1971ರಲ್ಲಿ ನಾನು ಚೆನ್ನೈ ನಗರದ ಪಾದಚಾರಿ ಮಾರ್ಗದಲ್ಲಿ ಕುಳಿತಿರುವಾಗ, ನನಗೆ ಹಸಿವೆಯಾಯಿತು. ಎಲ್ಲಾ ಅಂಗಡಿಗಳು ಮುಚ್ಚಲ್ಪಟ್ಟಿದ್ದವು ಮತ್ತು ಎರಡು ಪೋಲಿಸರು ನನ್ನ ಹತ್ತಿರ ಬಂದು ಎದ್ದೇಳು ನಮ್ಮ ಜೊತೆಗೆ ಬಾ ಎಂದು ಹೇಳಿದರು. ಅವರಿಗೆ ಗೊತ್ತಿರಲಿಲ್ಲ ನಾನು ರಾಜಮನೆತನದವನು ಎಂದು. ಯಾಕೆ ನೀನು ರಾತ್ರಿ 2 ಘಂಟೆಯಲ್ಲಿ ಕೂತಿರುವೆ ಎಂದು ಅವರು ನನಗೆ ಕೇಳಿದರು ನನಗೆ ಇಲ್ಲಿ ಯಾರು ಇಲ್ಲವೆಂದು ಉತ್ತರ ಕೊಟ್ಟೆನು. ಆದರೆ ದೇವರು ನನ್ನನ್ನು ಇಲ್ಲಿಗೆ ಕರೆದು ಕೊಂಡು ಬಂದಿದ್ದಾನೆ. ಒಬ್ಬ ಪೋಲಿಸ್‌ನು ನನಗೆ ಈ ರೀತಿಯಾಗಿ ಹೇಳಿದನು, ಎದ್ದೇಳು ನನ್ನ ಜೊತೆಯಲ್ಲಿ ಪೋಲಿಸ್ ಸ್ಟೇಷನ್‌ಗೆ ಬಾ ಎಂದು ಹೇಳಿದನು. ಇನ್ನೊಬ್ಬ ಪೋಲಿಸನು ತಡೆ ಅವನ ಮುಖವನ್ನು ನಾನು ನೋಡಿ, ಈತನು ಒಳ್ಳೆಯ ಕುಟುಂಬದಿಂದ ಬಂದಿದ್ದಾನೆ ಅಂತನಿಸುತ್ತದೆ. ಇವನು ಕಳ್ಳ ಅಥವಾ ಕುಡುಕನ ಹಾಗೆ ಕಾಣಿಸುವುದಿಲ್ಲ. ಇವನನ್ನು ಒಬ್ಬನಾಗಿ ಬಿಡುವುದು ಒಳ್ಳೆದೆಂದರು. ಅವರು ಒಳ್ಳೆಯ ಸಾಕ್ಷಿಯನ್ನು ನೀಡಿ ಹೋದರು.

(6ನೇ ಪುಟಕ್ಕೆ)

GREAT COMMISSION PARTNERS

ECHO OF HIS CALL MINISTRIES
SINCE 1969

# ಪರಮಾದೇಶದಲ್ಲಿ ಪಾಲುಗಾರರು

**ಹಂಚುವುದು (ಗಲಾತ್ಯ. 6:3), ಪ್ರೋತ್ಸಾಹಿಸುವುದು (ರೋಮಾಪುರ. 12:13) ತ್ವರಿತಗೊಳಿಸುವುದು (II ತಿಮೋಥಿ. 1:6)**

## ಸ್ತುತಿ ಮತ್ತು ಪ್ರಾರ್ಥನಾ ಮನವಿಗಳು

**19 ಜನವರಿ 2021 ರಿಂದ 18 ಫೆಬ್ರವರಿ 2021 ರ ವರೆಗೆ**

**(ಈ ಹಾಳೆಯನ್ನು ಹರಿದು ನಿಮ್ಮ ಸತ್ಯವೇದದೊಳಗಿಟ್ಟು ಇವುಗಳಿಗಾಗಿ ಪ್ರಾರ್ಥಿಸಿರಿ)**

### ಸ್ತೋತ್ರದ ಅಂಶಗಳು

| | |
|---|---|
| ಪೆಬ್ರವರಿ 19 | ನಮ್ಮ ಭಾನುವಾರ ಆರಾಧನೆಗಳನ್ನು ಆಶೀರ್ವದಿಸಿದಕ್ಕಾಗಿ. |
| ಪೆಬ್ರವರಿ 20 | ನಮ್ಮ ಮುಖ್ಯ ಸಭೆ ಮತ್ತು ವಿಭಾಗ ಸಭೆಗಳ ವಿಶ್ವಾಸಿಗಳನ್ನು ಆಶೀರ್ವದಿಸಿದಕ್ಕಾಗಿ. |
| ಪೆಬ್ರವರಿ 21 | ನಮ್ಮ ಮುಖ್ಯ ಸಭೆಯ ಸ್ತ್ರೀಯರ ಕೂಟವನ್ನು ದೇವರು ಆಶೀರ್ವದಿಸಿದಕ್ಕಾಗಿ. |
| ಪೆಬ್ರವರಿ 22 | ನಮ್ಮ ಬೆಂಬಲಿಗರ ಪ್ರಾರ್ಥನೆ ಮತ್ತು ಸಹಕಾರಕ್ಕಾಗಿ ದೇವರನ್ನು ಸ್ತುತಿಸೋಣ. |
| ಪೆಬ್ರವರಿ 23 | ದೇವರು ನಮ್ಮ 16 ಭಾಷೆಗಳ ಪ್ರಕಾಶನಗಳನ್ನು ಆಶೀರ್ವದಿಸಿದ್ದಾನೆ, ಅದನ್ನು ನಮ್ಮ ಮುದ್ರಣಾಲಯದಲ್ಲಿ ಮುದ್ರಿಸಲಾಗುತ್ತದೆ ಮತ್ತು ಸೇವಾ ಕ್ಷೇತ್ರಗಳಿಗೆ ಕಳುಹಿಸಲಾಗುತ್ತದೆ. |
| ಪೆಬ್ರವರಿ 24 | ಆತನ ಕರೆಯ ಪ್ರತಿಧ್ವನಿಯನ್ನು ಹೊಸ ಮಣಿಪುರಿ ಭಾಷೆಯಲ್ಲಿ ಆರಂಭ ಮಾಡುವಂತೆ ದೇವರು ಸಹಾಯ ಮಾಡಿದನು. |
| ಪೆಬ್ರವರಿ 25 | ಆತನ ಕರೆಯ ಪ್ರತಿಧ್ವನಿ ಇತರ ನಾಲ್ಕು ಭಾಷೆಗಳಿಗೂ ವಿಸ್ತರಿಸಲು ನಮ್ಮ ದರ್ಶನಕ್ಕಾಗಿ ದೇವರನ್ನು ಸ್ತುತಿಸೋಣ. |
| ಪೆಬ್ರವರಿ 26 | ನಮ್ಮ ಎಲ್ಲಾ ಸಹ ಸಂಪಾದಕರಿಗಾಗಿ ಹಾಗು ಅವರ ಕುಟುಂಬಗಳಿಗಾಗಿ ದೇವರನ್ನು ಸ್ತುತಿಸೋಣ. |
| ಪೆಬ್ರವರಿ 27 | ಆತನ ಕರೆಯ ಪ್ರತಿಧ್ವನಿ ಇತರ ನಾಲ್ಕು ಭಾಷೆಗಳಿಗೂ ವಿಸ್ತರಿಸಲು ನಮ್ಮ ದರ್ಶನಕ್ಕಾಗಿ ದೇವರನ್ನು ಸ್ತುತಿಸೋಣ. |
| ಪೆಬ್ರವರಿ 28 | ನಮ್ಮ ಸಭೆಯ ಪುರಷರ ಕೂಟಕ್ಕಾಗಿ ದೇವರನ್ನು ಸ್ತುತಿಸೋಣ. |
| ಮಾರ್ಚ್ 01 | ಕಳೆದ ತಿಂಗಳ ಆತನ ಕರೆಯ ಪ್ರತಿಧ್ವನಿಯ ಎಲ್ಲಾ ಸೇವೆಗಳಾಗಿ ದೇವರು ಆಶೀರ್ವದಿಸಿದ್ದಾನೆ. |
| ಮಾರ್ಚ್ 02 | ನಮ್ಮ ಸೇವಾಕ್ಷೇತ್ರಗಳಿಂದ ಒಳ್ಳೆಯ ವರದಿಗಳನ್ನು ಸ್ವೀಕರಿಸುತ್ತೇವೆ. |
| ಮಾರ್ಚ್ 03 | ನಮ್ಮ ಹಿರಿಯ ಸಭಾಪಾಲಕರಾದ ಪಾಸ್ಟರ್ ಸ್ಯಾಮ್ ಸೆಲ್ವರಾಜ್ ಮತ್ತು ಅವರ ಕುಟುಂಬವನ್ನು ಕೆಟ್ಟ ಸನ್ನಿವೇಶಗಳಿಂದ ನಮ್ಮ ಕರ್ತನು ಸಂರಕ್ಷಿಸಿದ್ದಾನೆ. |

### ಪ್ರಾರ್ಥನೆ ಮನವಿಯ ಅಂಶಗಳು

| | |
|---|---|
| ಫೆಬ್ರವರಿ 04 | ಆತನ ಕರೆಯ ಪ್ರತಿಧ್ವನಿಯ ಸೇವೆಗಳಿಗಾಗಿ ಈ ತಿಂಗಳ ಅಗತ್ಯ ಹಣವನ್ನು ದೇವರು ಒದಗಿಸುವಂತೆ. |
| ಮಾರ್ಚ್ 05 | ಪ್ರಪಂಚದ ಎಲ್ಲಾ ದೇಶಗಳಲ್ಲಿ ಕರೋನ ವೈರಸ್ ಸಂಪೂರ್ಣವಾಗಿ ನಿರ್ಮೂಲವಾಗುವಂತೆ ಪ್ರಾರ್ಥಿಸಿರಿ. |
| ಮಾರ್ಚ್ 06 | ಕರೋನ ಜ್ವರದಿಂದ ಯಾರು ತಮ್ಮ ಪ್ರೀಯರನ್ನು ಕಳೆದುಕೊಂಡು ದುಃಖದಲ್ಲಿದ್ದಾರೋ ಅವರಿಗಾಗಿ ಪ್ರಾರ್ಥಿಸಿರಿ. |
| ಮಾರ್ಚ್ 07 | ನಮ್ಮ ಆಂಗ್ಲ ಭಾಷೆಯ ಸಹ ಸಂಪಾದಕರಾದ ಸಹೋದರ ಎಂ. ಪಾಲ್‌ರಾಜ್‌ರವರ ಸಂಪೂರ್ಣ ಸ್ವಸ್ಥತೆಗಾಗಿ ನಿರಂತರವಾಗಿ ಪ್ರಾರ್ಥಿಸಿರಿ. |
| ಮಾರ್ಚ್ 08 | ನಮ್ಮ ಸೇವಾ ಕ್ಷೇತ್ರದ ಕೆಲಸಗರಿಗಾಗಿ ಪ್ರಾರ್ಥಿಸಿರಿ. |
| ಮಾರ್ಚ್ 09 | ಪ್ರಂಪಚದ ಎಲ್ಲಾ ಆತ್ಮೀಯ ನಾಯಕರುಗಳಿಗಾಗಿ ಪ್ರಾರ್ಥಿಸಿರಿ. |
| ಮಾರ್ಚ್ 10 | ಮಕ್ಕಳು ಮತ್ತು ಹೆಣ್ಣು ಮಕ್ಕಳ ಮೇಲೆ ನಡೆಯುವ ಅತ್ಯಾಚಾರ ಮತ್ತು ಅನ್ಯಾಯವು ಸಂಪೂರ್ಣವಾಗಿ ನಿರ್ಮೂಲನ ವಾಗುವಂತೆ ಪ್ರಾರ್ಥಿಸಿರಿ. |
| ಮಾರ್ಚ್ 11 | ಮಣಿಪುರಿ ಭಾಷೆಯ ಸಹ ಸಂಪಾದಕರಾದ ರೆವ. ಡಾ. ರಿಸಿಕಾಂತ ಸೊರಾಕೈಬಾಮ್ ಅವರಿಗಾಗಿ ಪ್ರಾರ್ಥಿಸಿರಿ. |
| ಮಾರ್ಚ್ 12 | ಆತನ ಕರೆಯ ಪ್ರತಿಧ್ವನಿಯ ಸೇವೆಗಳಿಗಾಗಿ ಹೆಚ್ಚು ಸಮರ್ಪಣೆಯುಳ್ಳ ಕೆಲಸಗಾರರು ದೇವರು ತರುವಂತೆ ಪ್ರಾರ್ಥಿಸಿರಿ. |
| ಮಾರ್ಚ್ 13 | ಎಲ್ಲಾ ಕ್ರೈಸ್ತ ಸಂಸ್ಥೆಗಳಿಗಾಗಿ ಪ್ರಾರ್ಥಿಸಿರಿ. |
| ಮಾರ್ಚ್ 14 | ದೇವರು ನಮ್ಮ ಸಹ ಸಂಯೋಜಕರಿಗೆ ಮತ್ತು ಸಭಾಪಾಲಕರಿಗೆ ಹೊಸ ಶಕ್ತಿಯನ್ನು ನೀಡುವಂತೆ ಪ್ರಾರ್ಥಿಸಿರಿ. |
| ಮಾರ್ಚ್ 15 | ನಮ್ಮ ಪ್ರಾರ್ಥನೆ ಸಹಭಾಗಿಗಳಿಗೆ, ಚಂದ ಸಹಭಾಗಿಗಳಿಗೆ, ನಂಬಿಕೆ ಸಹಭಾಗಿಗಳಿಗೆ, ಜೀವನ ಪಾಲುದಾರರಿಗೆ, ಉತ್ತಮ ಆರೋಗ್ಯದ ಹಕ್ಕುದಾರರಿಗೆ ಮತ್ತು ಕುಟುಂಬದವರಿಗೋಸ್ಕರ ಪ್ರಾರ್ಥಿಸಿರಿ. |
| ಮಾರ್ಚ್ 16 | ನಮ್ಮ ಸೇವೆಯ ಹಣಕಾಸಿನ ಅಗತ್ಯತೆಗಳಿಗಾಗಿ ಪ್ರಾರ್ಥಿಸಿರಿ. |
| ಮಾರ್ಚ್ 17 | ಆತನ ಕರೆಯ ಪ್ರತಿಧ್ವನಿಯ ಸೇವೆಗಳು ಕೋವಿಡ್ ಸಮಯದಲ್ಲಿ ದೇವರು ಆಶೀರ್ವದಿಸಿದಕ್ಕಾಗಿ ದೇವರನ್ನು ಸ್ತುತಿಸೋಣ. |
| ಮಾರ್ಚ್ 18 | ದೇವರು ನಿರಂತರವಾಗಿ ನಮ್ಮ ಹಿರಿಯ ಸಭಾಪಾಲಕರಾದ ಪಾಸ್ಟರ್ ಸ್ಯಾಮ್ ಸೆಲ್ವರಾಜ್ ಮತ್ತು ಅವರ ಕುಟುಂಬವನ್ನು ಕೆಟ್ಟ ಸನ್ನಿವೇಶಗಳಿಂದ ಕರ್ತನು ಸಂರಕ್ಷಿಸುವಂತೆ ಪ್ರಾರ್ಥಿಸಿರಿ. |

ನೀನು ನನ್ನ ಅಮೂಲ್ಯ ಮಗ ಮತ್ತು ಮಗಳು, ಕರ್ತನು ಹೇಳುತ್ತಾನೆ. ದೇವರು ನಿನಗೆ ಸಹಸ್ರಾರು ಜನರನ್ನು ಕೊಡುತ್ತಾನೆ. ಈ ಲೋಕದ ಜನರು ನಿನ್ನ ಕಷ್ಟ ಮತ್ತು ಸಂತೋಷದ ಸಮಯದಲ್ಲಿ ಸಹಾಯ, ಸಹಕಾರ ಮಾಡುವವರು. ಅವರು ನಿನಗೆ ವಂದಿಸುವವರು ಮತ್ತು ಪ್ರಶಂಸೆ ಮಾಡುವವರು. ದೇವರ ವಾಕ್ಯ ಈ ರೀತಿಯಾಗಿ ಹೇಳುತ್ತದೆ, ಭಯಪಡಬೇಡ, ನಾನು ನಿನ್ನನ್ನು ವಿಮೋಚಿಸಿದ್ದೇನೆ, ನಾನು ನಿನ್ನ ಹೆಸರಿಡಿದು ಕರೆದಿದ್ದೇನೆ, ನೀನು ನನ್ನವನು. ನೀನು ತಪ್ಪಿಹೋದ ಮಗನ ಹಾಗೆ ಇರಬಾರದು. ನಾನು ರಾಜನ ರಕ್ತಕ್ಕೆ ಸೇರಿದವನು ಎಂಬ ಪದಗಳ ಅರ್ಥವನ್ನು ಅವನು ಬಹಳ ತಡವಾಗಿ ಅರಿತುಕೊಂಡನು. ಈಗ ನೀವು ಸೂಕ್ಷ್ಮವಾಗಿರಿ. ನೀವು ರಾಜಮನೆತನಕ್ಕೆ ಸಂಬಂದಪಟ್ಟವರು. ಸತ್ಯವೇದ ಹೇಳುತ್ತದೆ, ನೀವಾದರೂ ನಿಮ್ಮನ್ನು ಕತ್ತಲೆಯೊಳಗಿಂದ ಕರೆದು ತನ್ನ ಆಶ್ಚರ್ಯಕರವಾದ ಬೆಳಕಿನಲ್ಲಿ ಸೇರಿಸಿದಾತನ ಗುಣಾತಿಶಯಗಳನ್ನು ಪ್ರಚಾರ ಮಾಡುವವರಾಗುವಂತೆ ದೇವರಾದು ಕೊಂಡ ಜನಾಂಗವೂ ರಾಜವಂಶಸ್ಥರಾದ ಯಾಜಕರೂ ಮಿಶಲಾದ ಜನವೂ ದೇವರ ಸ್ವಕೀಯ ಪ್ರಜೆಯೂ ಆಗಿದ್ದೀರಿ (1 ಪೇತ್ರ 2:9). ನೀವೂ ವಿಶೇಷವಾದವರು. ಕರ್ತನು ತನ್ನ ದೂತರನ್ನು ನಿಮ್ಮ ಮೇಲೆ ಆಜ್ಞಾಪಿಸುತ್ತಾನೆ ಮತ್ತು ನಿಮ್ಮನ್ನು ರಕ್ಷಿಸುತ್ತಾನೆ.

ನಮ್ಮ ದೇವರು ನಿಮ್ಮನ್ನು ಕಣ್ಣಿನ ಸೇಬಿನಂತೆ ನೋಡಿಕೊಳ್ಳುತ್ತಿದ್ದಾನೆ. ನಿಮ್ಮ ಕಾಲು ಕಲ್ಲಿಗೆ ತಗಲದಂತೆ ಆತನು ನೋಡಿಕೊಳ್ಳುತ್ತಾನೆ. ನಿಮ್ಮ ಅಗತ್ಯತೆಗಳನ್ನು ಪೂರೈಸುತ್ತಾನೆ. ಈ ಹೊತ್ತು ನೀವು ಯಾವುದೇ ವಿಷಯಗಳಿಗೆ ಹೆದರುತ್ತಿರ ಬಹುದು, ಮನುಷ್ಯರ ಮಾತುಗಳನ್ನು ಕೇಳಬೇಡಿರಿ. ಈ ಲೋಕವು ನಿಮ್ಮನ್ನು ಭಯ ಪಡಿಸುತ್ತದೆ. ದೇವರು ಹೇಳುವುದನ್ನು ಕೇಳಿರಿ, ಭಯ ಪಡಬೇಡ ನಾನು ನಿಮ್ಮನ್ನು ವಿಮೋಚಿಸಿದ್ದೇನೆ, ನಾನು ನಿನ್ನ ಹೆಸರಿಡಿದು ಕರೆದಿದ್ದೇನೆ, ನೀನು ನನ್ನವನು.

ಈಗ ನೀವು ನಿಮ್ಮ ಎದೆಯ ಮೇಲೆ ಕೈಯಿಟ್ಟು ನಾನು ಯೇಸುವಿಗೆ ಸಂಬಂದ ಪಟ್ಟವನೆಂದು ಹೇಳಿರಿ. ದೇವರು ನಿಮ್ಮನ್ನು ಕಣ್ಣಿನ ಸೇಬಿನಂತೆ ನೋಡಿ ಕೊಳ್ಳುತ್ತಿದ್ದಾನೆ. ನೀನು ನಡೆಯುವಾಗ ಆತನು ನಿನ್ನನ್ನು ರಕ್ಷಿಸುತ್ತಾನೆ, ನಿನ್ನ ಅಗತ್ಯತೆಗಳು ಪೂರೈಸಲ್ಪಡುವವು. ಆತನು ನಿನಗೆ ಅನೇಕ ಜನರನ್ನು ಕೊಡುವನು.

ಯಾವಾಗ ನಾವು 16 ಭಾಷೆಗಳಲ್ಲಿ ಸೇವೆ ಮಾಡುತ್ತಿರುವಾಗ, ನೀನು ಇನ್ನೊಂದು ಭಾಷೆ ಮಾತನಾಡುವ ಜನರಿಗೆ ಸೇವೆ ಮಾಡಬೇಕೆಂದು ದೇವರು ಹೇಳಿದನು. ಅದು ಯಾವ ಭಾಷೆ ಎಂದು ನನಗೆ ಗೊತ್ತಿರಲಿಲ್ಲ. ಮಣಿಪುರದ ಒಬ್ಬ ಸಭಾಪಾಲಕನು ನನ್ನನ್ನು ಸಮೀಪಿಸಿದನು. ನಾವು ನಿಮ್ಮ ಪತ್ರಿಕೆಯನ್ನು ಪ್ರಕಟಿಸುವದಕ್ಕೆ ಮಣಿಪುರದಿಂದ ಸಿದ್ದರಿದ್ದೇವೆಂದು ಹೇಳಿದನು. ದಯಮಾಡಿ ನಮಗೆ ಮಾಡುವದಕ್ಕೆ ಅಪ್ಪಣೆ ಕೊಡಿರಿ ಎಂದು ಕೇಳಿದನು. ಮಣಿಪುರದಲ್ಲಿ ಆತನ ಕರೆಯ ಧ್ವನಿಯ ಪ್ರತಿಕೆಯನ್ನು ಪ್ರಕಟಿಸಲು ದೇವರು ಅದ್ಭುತವಾಗಿ ನಮಗೆ ಸಹಾಯ ಮಾಡಿದನು. ಮಣಿಪುರದಲ್ಲಿ ಕೂಡ ದೇವರು ಈಗ ಬಹಳವಾಗಿ ಕಾರ್ಯ ಮಾಡುತ್ತಾ ಇದ್ದಾನೆ.

ಈ ರೀತಿಯಾಗಿ ದೇವರ ವಾಕ್ಯವು ಕಾರ್ಯ ಮಾಡುತ್ತದೆ. ಅದು ಎಂದಿಗೂ ವ್ಯರ್ಥವಾಗಿ ಹೋಗುವುದಿಲ್ಲ. ನಿನ್ನ ಜೀವನಕ್ಕಾಗಿ ನಾನು ನಿನಗೆ ಜನರನ್ನು ಕೊಡುತ್ತೇನೆ. ಹೌದು, ಪ್ರೀಯರೇ, ನಿಮ್ಮ ಸಮರ್ಪಣೆಯ ಬದ್ಧತೆಗೆ ಪ್ರತಿಯಾಗಿ. ದೇವರು ಅನೇಕ ಬಾಷೆಗಳನ್ನು ಮಾತನಾಡುವ ಜನರನ್ನು ನಿಮಗೆ ಆತನು ಕೊಡುತ್ತಾನೆ. ಅನೇಕ ಬೇರೆ ಬೇರೆ ಸಂಸ್ಕತಿಯ ಜನರನ್ನು, ನಮ್ಮ ಕರ್ತನು ನಮಗೆ ವಾಗ್ದಾವನ್ನು ಮಾಡಿದ್ದಾನೆ. ನೀವು ದೇವರ ಮಕ್ಕಳಾಗಿದ್ದೀರಿ. ನೀವು ಆತನನ್ನು ನಿಮ್ಮ ಸ್ವಂತ ರಕ್ಷಕನಾಗಿ ಅಂಗೀಕರಿಸಿದ್ದೀರಿ. ನೀವು ಆತನ ಮಕ್ಕಳಾಗಿದ್ದೀರಿ. ನೀವು ಆತನ ದಯೆ ಮತ್ತು ಪ್ರೀತಿಯನ್ನು ಪಡೆದುಕೊಂಡಿದ್ದೀರಿ. ನೀವು ಇನ್ನೂ ತಾಯಿಯ ಗರ್ಭದಲ್ಲಿರುವಾಗ ಆತನು ನಿಮ್ಮನ್ನು ಅರಿಸಿಕೊಂಡಿದ್ದಾನೆ. ಆತನು ನಿಮ್ಮನ್ನು ಅದ್ಭುತ ಕಾರ್ಯ ಮಾಡುವದಕ್ಕಾಗಿ ಉಪಯೋಗಿಸಿ ಕೊಳ್ಳುತ್ತಾನೆ. ನೀನು ನದಿಗಳನ್ನು ದಾಟುವಾಗ ನಾನು ನಿನ್ನ ಸಂಗಡ ಇರುತ್ತೇನೆ, ಅವುಗಳು ನಿನ್ನನ್ನು ಮುಣಿಗಸವು, ನೀನು ಬೆಂಕಿಯಲ್ಲಿ ನಡೆಯುವಾಗ ಅವುಗಳು ನಿನ್ನನ್ನು ಸುಡುವುದಿಲ್ಲ, ನಿನ್ನನ್ನು ಮುಟ್ಟುವುದಿಲ್ಲ. ನೀನು ನನ್ನ ಅಮೂಲ್ಯ ಮಗನು, ನೀನು ನನ್ನ ಅಮೂಲ್ಯ ಮಗಳು. ನಿಮ್ಮ ಸೇವೆಯನ್ನು ಕರ್ತನು ನೋಡಿ ಸಂತೋಷ ಪಡುತ್ತಾನೆ. ದೇವರು ನಿನ್ನನ್ನು ನೋಡಿ ಹೀಗೆ ಹೇಳುತ್ತಾನೆ, ನೀನು ನನ್ನ ಅಮೂಲ್ಯ ಮಗನು, ನೀನು ನನ್ನ ಅಮೂಲ್ಯ ಮಗಳು.

ನಿಮ್ಮನ್ನು ನೀವು ಯಾವುದೇ ಕಾರಣಕ್ಕೂ ಕಡಿಮೆ ಮಾಡಿಕೊಳ್ಳಬೇಡಿ. ನೀವು ರಾಜನ ಕುಟುಂಬಕ್ಕೆ ಸಂಬಂದಪಟ್ಟವರು ಎಂದು ಜ್ಞಾಪಿಸಿಕೊಳ್ಳಿರಿ. ತಪ್ಪಿಹೋದ ಮಗನು ಅರಿವಿಗೆ ಬಂದ ಅರ್ಥಗರ್ಭಿತ ಮಾತುಗಳು ನಾನು ರಾಜನ ರಕ್ತಕ್ಕೆ ಸಂಬಂದಪಟ್ಟವನು. ಪಶ್ಚಾತ್ತಾಪಪಟ್ಟು ತನ್ನ ತಂದೆತಾಯಿಗಳ ಬಳಿಗೆ ಬಂದನು. ಈ ಹೊತ್ತು ನೀವು ಕೂಡ ಪಶ್ಚಾತ್ತಾಪ ಪಡಿರಿ. ದಯಮಾಡಿ ಅರ್ಥಮಾಡಿಕೊಳ್ಳಿರಿ ನಮ್ಮೊಳಗೆ ಯೇಸುವಿನ ರಕ್ತವು ಹರಿಯುತ್ತದೆ. ನೀವು ಆತನ ರಕ್ತದ ಕೋಟೆಗೆ ಬಂದಿದ್ದೀರಿ. ಯಾವ ಕೇಡು ನಿನ್ನ ಗುಡಾರಕ್ಕೂ ಬಾರದು. ನಿಮ್ಮ ಜೀವಿತದಲ್ಲಿ ಒಳ್ಳೆಯ ಸಂಗತಿಗಳು ಆಗುತ್ತವೆ. ನೀವು ಸಾಲಕೊಡುವಿರಿ ಹೊರತು, ಸಾಲ ತೆಗೆದುಕೊಳ್ಳುವುದಿಲ್ಲ. ಪರಿಶುದ್ದ ತಂದೆ ನಿನಗೆ ವಂದನೆ. ದೇವರು ಏನು ಹೇಳಿದ್ದಾನೆ ಅದನ್ನು ಆತನು ಮಾಡುತ್ತಾನೆ. ಹೀಗಿರುವದರಿಂದ ದೇವರ ತ್ರಾಣವುಳ್ಳ ಹಸ್ತದ ಕೆಳಗೆ ನಿಮ್ಮನ್ನು ತಗ್ಗಿಸಿಕೊಳ್ಳಿರಿ; ಆತನು ತಕ್ಕ ಕಾಲದಲ್ಲಿ ನಿಮ್ಮನ್ನು ಮೇಲಕ್ಕೆ ತರುವನು (1 ಪೇತ್ರ 5:6).

❖ ❖ ❖

## ಕ್ಷೇತ್ರದ ವರದಿ

ಮೊಟ್ಟ ಮೊದಲನೆಯದಾಗಿ ನಾವು (ಪಂಜಾಬ್ ನಿಂದ ನಮ್ಮ ಇಡೀ ಮಾರಾರ್ಡು ಕುಟುಂಬ) ನಮ್ಮ ರಕ್ಷಕನಾದ ಯೇಸುಕ್ರಿಸ್ತನ ಪವಿತ್ರ ಮತ್ತು ಪ್ರಬಲವಾದ ಹೆಸರಿನಲ್ಲಿ 2021ರ ಹೊಸ ವರ್ಷದ ಶುಭಾಶಯಗಳನ್ನು ಕೋರುತ್ತೇವೆ.

ನಾನು ವ್ಯಯಕ್ತಿಕವಾಗಿ ಸಂತೋಷ ಮತ್ತು ಆಶೀರ್ವಾದವನ್ನು ನಿಮ್ಮ ಈ ಮೇಲ್‌ನಿಂದ ನಾನು ಸ್ವೀಕರಿಸಿಕೊಂಡಿದ್ದೇನೆ ಮತ್ತು ಅದರಲ್ಲಿ ಆಶೀರ್ವಾದದ ನಿರುಪದ್ರವಿ ಪದಗಳು.ನಾವು ಇನ್ನೂ ಕ್ರಿಸ್ತನಲ್ಲಿ ಹೆಚ್ಚು ನಂಬಿಕೆಯಿಡುವದಕ್ಕೆ ಹಾಗು ಆತನ ವಾಕ್ಯದಲ್ಲಿ ಬೆಳೆಯುವುದಕ್ಕೆ ಈ ಮಾತುಗಳು ನಮಗೆ ಪ್ರೋತ್ಸಾಹಯದಾಯಕವಾಗಿವೆ.

ನಾವಿಬ್ಬರು (ನಾನು ನನ್ನ ಪ್ರೀತಿಯ ಹೆಂಡತಿ ನೀಲಮ್ಮ ಕೌರ್ ಮಾರಾರ್ಡು) 2020 ರ ಡಿಸೆಂಬರ್‌ನಲ್ಲಿ ಅದನ್ನು ನಿಮಗೆ ತಿಳಿಸಲು ನಮ್ಮ ಸಂತೋಷವನ್ನು ಅನುಭವಿಸಿ, ಕರ್ತನಾದ ಯೇಸುಕ್ರಿಸ್ತನು ತನ್ನ ರಾಜ್ಯದ ಸುವಾರ್ತೆಯನ್ನು ಅನ್ಯಜನರಿಗೆ, ಯಾರಿಗೆ ಕರ್ತನಾದ ಯೇಸುಕ್ರಿಸ್ತನು ಗೊತ್ತಿಲ್ಲವೋ ಅವರಿಗೆ ಸಾರುವದಕ್ಕೆ ನಮ್ಮನ್ನು ಉಪಯೋಗಿಸಿಕೊಂಡನು.

ತೀವ್ರ ಶೀತ ಹವಾಮಾನ / ದಟ್ಟವಾದ ಚಳಿಗಾಲದಲ್ಲಿ ನಮ್ಮ ರಾಜ್ಯ ಪಂಜಾಬ್‌ನ ವಿವಿಧ ಸ್ಥಳಗಳಲ್ಲಿ/ ಜಿಲ್ಲೆಗಳಲ್ಲಿ 14 ಪ್ರಾರ್ಥನಾ ಸಭೆಗಳಲ್ಲಿ ದೇವರ ಪವಿತ್ರ ವಾಕ್ಯವನ್ನು ಭೋದಿಸಲು ದೇವರಾದ ಕರ್ತನು ನಮಗೆ ಸಹಾಯ ಮಾಡಿದನು. ಎಲ್ಲಾ ಸ್ತುತಿ, ಮಹಿಮೆಯು ಆತನ ಪವಿತ್ರವಾದ ನಾಮಕ್ಕಾಗಲಿ (ಯೇಸು).

ನಮ್ಮ ಎಲ್ಲಾ ಕ್ಲೇಶಗಳಲ್ಲಿ ನಮಗೆ ಸಾಂತ್ವನ ನೀಡುವ ನಮ್ಮ ಪರಲೋಕದ ತಂದೆಯಾದ ಕರ್ತನಾದ ದೇವರಿಗೆ ನಾವು ಧನ್ಯವಾದಗಳನ್ನು ಮತ್ತು ಸ್ತುತಿಸುತ್ತೇವೆ. ಯಾವುದೇ ತೊಂದರೆ ಯಲ್ಲಿರುವವರನ್ನು ನಾವು ಸಾಂತ್ವನಗೊಳಿಸಲು ಸಾಧ್ಯವಾಗುತ್ತದೆ (2 ಕೊರಿಂಥ 2:3-4) ಮತ್ತು ವಿಜಯೋತ್ಸವದಲ್ಲಿ ಪ್ರತಿದಿನ ನಡೆಯಲು ನಮಗೆ ಸಹಾಯ ಮಾಡುತ್ತದೆ.

ನಾವು ನಿಮಗಾಗಿ ನಿರಂತರವಾಗಿ ಪ್ರಾರ್ಥಿಸುತ್ತೇವೆ, ನಿಮ್ಮ ಕುಟುಂಬ ಮತ್ತು ಕರ್ತನ ಸೇವೆಯನ್ನು ನೀವು 1969 ರಿಂದ ಪ್ರಾಮಾಣಿಕವಾಗಿರುತ್ತೀರಿ. ನಮಗೆ ನಿಶ್ಚಯವುಂಟು, ನಮ್ಮ ಕರ್ತನಾದ ದೇವರು ನಿಮ್ಮ ಅಗತ್ಯತೆಗಳನ್ನು ಯೇಸುಕ್ರಿಸ್ತನಲ್ಲಿ ಹೆಸರಿನಲ್ಲಿ ಪೂರೈಸುತ್ತಾನೆ. ಆತನ ರಾಜ್ಯದಲ್ಲಿ ಯಾವುದೇ ಕೊರತೆಯಿಲ್ಲ. ಆತನ ಮೇಲೆ ಮತ್ತು ಆತನ ಪರಿಶುದ್ದ ವಾಕ್ಯ ಮೇಲೆ ನಮಗೆ ಸಂಪೂರ್ಣ ನಂಬಿಕೆ ಇದೆ. ಆತನು ಅಸಾಧ್ಯವಾದ ಕಾರ್ಯಗಳನ್ನು ಸಾದ್ಯ ಮಾಡಲಿಕ್ಕೆ ಯೋಗ್ಯವುಳ್ಳವನಾಗಿದ್ದಾನೆ. ಆತನಿಗೆ ಕಷ್ಟಕರವಾದ ಅಥವಾ ಅಸಾಧ್ಯವಾದದ್ದು ಯಾವುದೇ ಇಲ್ಲ.

**ರೆವ. ಶಶಾರ್ ಸಿಂಗ್ ಮರಾರ್ಡು, ಪಂಜಾಬ್.**

# ಎಲ್ಲಾ ನೀತಿಯನ್ನು ಪೂರೈಸಲು

ಚಕ್ರವರ್ತಿಯಾದ ತಿಬೇರಿಯನು ಪಟ್ಟಕ್ಕೆ ಬಂದ ಹದಿನೈದನೆಯ ವರುಷದಲ್ಲಿ, ಅಥವಾ ನಮ್ಮ ಪ್ರಸ್ತುತ ದಿನಾಂಕದ ವ್ಯವಸ್ಥೆಯಲ್ಲಿ ಸುಮಾರು ಎ.ಡಿ 30, ಜೆಕರ್ಯ ಮತ್ತು ಎಲಿಸಬತ್‌ರವರ ಮಗನಿಗೆ ದೇವರ ವಾಕ್ಯವು ಬಂದಿತು (ಲೂಕ 3:1-13). ಆತನು ಪಾಪಗಳ ಪಶ್ಚತ್ತಾಪ ಮತ್ತು ದೀಕ್ಷಾಸ್ನಾನದ ಬಗ್ಗೆ ಪ್ರಸಂಗಿಸುವದಕ್ಕೆ ಆರಂಭಿಸಿದನು. ಆತನ ಹೆಸರು ಯೋಹಾನ. ಆತನನ್ನು ಬ್ಯಾಪ್ಟಿಸ್ಟ್ ಅಥವಾ ಬ್ಯಾಪ್ಟ್ಸ್ಜರ್ ಎಂದು ಕರೆಯಲಾಗುತ್ತಿತ್ತು. ಯೋರ್ದಾನ್ ನದಿಯ ಸುತ್ತಲಿನ ಪ್ರದೇಶದ ಅನೇಕ ಜನರು ಬಂದು ಆತನ ಮಾತುಗಳಿಗೆ ಕಿವಿಗೊಟ್ಟರು ಮತ್ತು ಅವರ ಪಾಪಗಳ ಬಗ್ಗೆ ಪಶ್ಚಾತ್ತಾಪ ಪಟ್ಟರು. ದೇವರ ಚಿತ್ತಾನುಸಾರ ವಾಗಿರುವ ದುಃಖವು ಮಾನಸಾಂತರವನ್ನುಂಟು ಮಾಡಿ ರಕ್ಷಣೆಗೆ ಕಾರಣವಾಗಿದೆ (2 ಕೊರಿಂಥ 7:10) ಮತ್ತು ದೈವಿಕ ಮಾರ್ಗಗಳಲ್ಲಿ ಬದುಕಲು ದೃಢನಿಶ್ಚಯದ ಬದಲಾವಣೆಯನ್ನು ಮಾಡುವುದು (ಅಪೋಸ್ತಲ 3:19, 26:20). ಪಶ್ಚಾತ್ತಾಪ ಹೊಂದಿ, ಅವರು ತಮ್ಮ ಪಾಪಗಳನ್ನು ಅರಿಕೆ ಮಾಡಿದರು. ಯೋರ್ದಾನ್ ನದಿಯಲ್ಲಿ ಯೋಹಾನನು ದೀಕ್ಷಾಸ್ನಾನ ಮಾಡಿಸಿದನು (ಮತ್ತಾಯ 3:5-6). ಬ್ಯಾಪ್ಟ್‌ಜ್ ಅಥವಾ ಬ್ಯಾಪ್ಟಿಸ್ಮ ಎಂಬ ಶಬ್ದವು ಸಂಪೂರ್ಣವಾಗಿ ನೀರಿನಲ್ಲಿ ಮುಳುಗುವುದು.

ಆ ಕಾಲದಲ್ಲಿ ಯೇಸು ಯೋಹಾನನಿಂದ ಸ್ನಾನ ಮಾಡಿಸಿಕೊಳ್ಳಬೇಕೆಂದು ಗಲಿಲಾಯದಿಂದ ಯೊರ್ದನ್ ಹೊಳೆಗೆ ಬಂದನು. ಆಗ ಯೋಹಾನನು ನಾನು ನನ್ನಿಂದ ಸ್ನಾನ ಮಾಡಿಸಿಕೊಳ್ಳ ತಕ್ಕವನಾಗಿರುವಲ್ಲಿ ನೀನು ನನ್ನ ಬಳಿಗೆ ಬರುವದೇನು ಎಂದು ಹೇಳಿ ಆತನನ್ನು ತಡೆಯುತ್ತಾ ಇದ್ದನು. ಆದರೆ ಯೇಸು ಅವನಿಗೆ-ಸದ್ಯಕ್ಕೆ ಒಪ್ಪಿಕೊ; ಹೀಗೆ ನಾವು ಎಲ್ಲಾ ಧರ್ಮವನ್ನು ನೆರವೇರಿಸತಕ್ಕದ್ದಾಗಿದೆ ಎಂದು ಹೇಳಿದಾಗ ಅವನು ಒಪ್ಪಿಕೊಂಡನು (ಮತ್ತಾಯ 3:13-15).

ಯೋಹಾನನ ಉದ್ದೇಶವು ಮೆಸ್ಸಿಯನಿಗಾಗಿ ದಾರಿಯನ್ನು ಸಿದ್ದ ಮಾಡುವುದು ಆಗಿತ್ತು, ಈ ಲೋಕದ ಆತ್ಮೀಕ ರಕ್ಷಕನು (ಲೂಕ 7:27, ಮಲಾಕಿಯ 3:1). ಯೇಸುವಿನ ವಿಶೇಷ ಗುಣಮಟ್ಟವನ್ನು ಗುರುತಿಸುವುದು, ಯೇಸು ಅವನನ್ನು ದೀಕ್ಷಾಸ್ನಾನ ಮಾಡಿಸಿದರೆ ಅದು ಹೆಚ್ಚು ಸೂಕ್ತವೆಂದು ಯೋಹಾನನು ಭಾವಿಸಿದನು. ಯೋಹಾನನಿಗೆ, ಯೇಸುವಿನ ವಿನಂತಿಯು ಏನಾಗಬೇಕು ಎಂಬುದರ ವಿರುದ್ದವಾಗಿ ಕಾಣುತ್ತದೆ. ಆದರೆ ಯೇಸುವಿಗೆ ದೇವರ ಚಿತ್ತವು ಗೊತ್ತಿತ್ತು. ಆತನ ಸಾರ್ವಜನಿಕ ಸೇವೆಯ ಆರಂಭದಲ್ಲಿ ನೀರಿನಲ್ಲಿ ಮುಳುಗಬೇಕು ಎಂದು ಆತನಿಗೆ ತಿಳಿದಿತ್ತು (ಲೂಕ 3:21-23). ಆತನು ಯೋಹಾನನಿಗೆ ಕಾರಣವನ್ನು ಹೇಳಿದನು, ನೀತಿಯನ್ನು ಪೂರೈಸಬೇಕೆಂದು, ಆದುದರಿಂದ ಯೋಹಾನನು ಯೇಸುವನ್ನು ಯೋರ್ದಾನ್ ಹೊಳೆಯಲ್ಲಿ ಮುಳುಗಿಸಿದನು (ಮಾರ್ಕ 1:9-10). ಆದರೆ ಆ ಪದಗಳಿಂದ ಯೇಸುವಿನ ಅರ್ಥವೇನು? ಆತನ ಸಾರ್ವಜನಿಕ ಸೇವೆಯು ಆರಂಭವಾಗುವುದಕ್ಕಿಂತ ಮುಂಚೆ ಆತನ ದೀಕ್ಷಾಸ್ನಾನ. ಎಲ್ಲಾ ನೀತಿಯನ್ನು ಪೂರೈಸುವಲ್ಲಿ ಯೇಸು ಕನಿಷ್ಠ ಎರಡು ಪ್ರಮುಖ ವಿಷಯಗಳನ್ನು ಸಾಧಿಸಿದನು.

## ಯೇಸು ದೇವರಿಗೆ ವಿಧೇಯನಾದನು

ಸೂಕ್ತ ಸಮಯ ಬಂದಾಗ, ಮೋಶೆಯ ಧರ್ಮಶಾಸ್ತ್ರ ಪ್ರಕಾರ ವಾಸಿಸುವ ಯೆಹೂದ್ಯಗಳನ್ನು ಮಾತ್ರವಲ್ಲದೇ ಎಲ್ಲಾ ಜನರನ್ನು ಉಳಿಸಲು ದೇವರು ತನ್ನ ಮಗನನ್ನು ಲೋಕಕ್ಕೆ ಕಳುಹಿಸಿದನು (ಯೋಹಾನ 3:16, ರೋಮಾ 4:7, 5:2, ಗಲಾತ್ಯ 4.4, ಇಬ್ರಿಯ 2:9-10). ಲೋಕದ ಪಾಪಗಳನ್ನು ತೆಗೆದು ಹಾಕುವ ಪಾಪವಿಲ್ಲದ ತ್ಯಾಗದಂತೆ ಯೇಸು ದೇವರ ಯೋಜನೆಯನ್ನು ಪೂರೈಸುತ್ತಾನೆ (ಮತ್ತಾವ 5:17, ಯೋಹಾನ 6:38-40; ಗಲಾತ್ಯ 1:4; 1 ಪೇತ್ರ 2:24; 1 ಯೋಹಾನ 3:5). ಇದನ್ನು ಮಾಡುವದಕ್ಕೆ, ಆತನು ಧರ್ಮಶಾಸ್ತ್ರದ ಪ್ರಕಾರ ಪರಿಪೂರ್ಣ ವಾಗಿರಬೇಕು ಮತ್ತು ದೇವರಿಗೆ ವಿಧೇಯನಾಗಿ ಪರಿಪೂರ್ಣನಾಗಿರಬೇಕು (ಇಬ್ರಿಯ 5:8-9; 1 ಪೇತ್ರ 1:18-19). ಇದು ಪ್ರಕರಣ ಎಂದು ಯೇಸು ಒಪ್ಪಿಕೊಂಡ (ಯೋಹಾನ 4:34; 14:11; 15:10; ಇಬ್ರಿಯ 10:9). ಆತನು ದೇವರ ಕಾರ್ಯಗಳನ್ನು ಕಾರ್ಯ ಮಾಡಿದನು (ಯೋಹಾನ 9:4) ಮತ್ತು ತಂದೆ ಹೇಳಬೇಕೆಂದು ಆತನು ಬಯಸಿದ ಮಾತುಗಳನ್ನು ಆತನು ಹೇಳಿದನು (ಯೋಹಾನ 12:48-50). ಆತನು ಸಾಯುವವರಿಗೆ ವಿಧೇಯನಾದನು (ಫಿಲಿಪ್ಪಿ 2:8) ಮತ್ತು ಆತನ ವಿಧೇಯತೆ, ಆತನ ಪುನರುತ್ಥಾನ ಮತ್ತು ದೇವರ ಕೃಪೆಯೊಂದಿಗೆ (ಅಪೋಸ್ತಲ 1:22; ರೊಮಾಪುರ 3:24-25; 6:5-11; ಎಫೆಸ 2:5-8; 1 ಪೇತ್ರ 1:3-4), ರಕ್ಷಣೆವು ಎಲ್ಲಾ ಪುರುಷರು ಮತ್ತು ಮಹಿಳೆಯರಿಗೆ ಲಭ್ಯವಾಗುವಂತೆ ಮಾಡಿದೆ (ರೋಮ 5:19-21;2 ಕೊರಿಂಥ 5:15; ಗಲಾತ್ಯ 3:7-8; ಇಬ್ರಿಯ 5:8-9; ತೀತ 2:11).

ಯೇಸುಕ್ರಿಸ್ತನು ನಂಬಿಗಸ್ತನು, ಪಾಪ ವಿಲ್ಲದವನು (ಇಬ್ರಿಯ 2:17; 3:2; 4:15;1 ಪೇತ್ರ 2:2:2). ಪಾಪವಿಲ್ಲದೆ, ಆತನು ದೀಕ್ಷಾಸ್ನಾನದ ಮುಂಚಿತವಾಗಿ ಪಶ್ಚಾತ್ತಾಪ ಅಥವಾ ಪಾಪಗಳನ್ನು ಒಪ್ಪಿಕೊಳ್ಳುವ ಅಗತ್ಯವಿಲ್ಲ. ಆದರೆ, ಆತನ ದೀಕ್ಷಾಸ್ನಾನವು ಅವಶ್ಯಕತೆಯಾಗಿತ್ತು. ನಾವು ಅದರ ಪ್ರಾಮುಖ್ಯತೆಯನ್ನು ಹಲವಾರು ವಿಷಯಗಳಿಂದ ನೋಡುತ್ತೇವೆ. ಎಲ್ಲಾ ನೀತಿಯನ್ನು ಪೂರೈಸುವ ಸಲುವಾಗಿ ಆತನು ಅದನ್ನು ಒತ್ತಾಯಿಸಿದನು. ಯೇಸುವಿನ ದೀಕ್ಷಾಸ್ನಾನದ ನಂತರ, ಸ್ನಾನಿಕನಾದ ಯೋಹಾನನು ಯೇಸುವು ದೇವರ ಮಗನೆಂದು ಸಾಕ್ಷಿಯನ್ನು ಕೊಡುವದಕ್ಕೆ ಸಾಧ್ಯವಾಯಿತು. ಮರುದಿನ ಯೋಹಾನನು ತನ್ನ ಕಡೆಗೆ ಬರುವ ಯೇಸುವನ್ನು ನೋಡಿ - ಅಗೋ ಯಜ್ಞಕ್ಕೆ ದೇವರು ನೇಮಿಸಿದ ಕುರಿ, ಲೋಕದ ಪಾಪವನ್ನು ನಿವಾರಣೆ ಮಾಡುವವನು. ನನ್ನ ಹಿಂದೆ ಬರುವವನು ನನಗಿಂತ ಮೊದಲೇ ಇದದ್ದರಿಂದ ನನಗೆ ಮುಂದಿನವನಾದನು ಎಂದು ನಾನು ಹೇಳಿದ ಮಾತು ಈತನ ವಿಷಯವಾಗಿಯೇ. ನನಗೂ ಆತನ ಗುರುತಿರಲಿಲ್ಲ; ಆದರೆ ಆತನನ್ನು ಇಸ್ರಾಯೇಲ್ಯರಿಗೆ ತಿಳಿಯ ಪಡಿಸುವದ ಕ್ಕೋಸ್ಕರವೇ ನಾನು ನೀರಿನ ಸ್ನಾನವನ್ನು ಮಾಡಿಸುವವನಾಗಿ ಬಂದೆನು ಅಂದನು.ಇದಲ್ಲದೆ ಯೋಹಾನನು ಸಾಕ್ಷಿಕೊಟ್ಟು ಹೇಳಿದ್ದೇನೆಂದರೆ- ದೇವರಾತ್ಮವು ಪಾರಿವಾಳದಂತೆ ಆಕಾಶದಿಂದ ಇಳಿಯುವದನ್ನು ನೋಡಿದೆನು. ಅದು ಆತನ ಮೇಲೆ ನೆಲೆಗೊಂಡಿತು. ನನಗೂ ಆತನ ಗುರುತಿರಲಿಲ್ಲ; ಆದರೆ ನೀರಿನ ಸ್ನಾನವನ್ನು ಮಾಡಿಸುವದಕ್ಕೆ ನನ್ನನ್ನು ಕಳುಹಿಸಿದಾತನು- ಯಾವನ ಮೇಲೆ ಆತ್ಮವು ಇಳಿದು ಬಂದು ಇರುವದನ್ನು ನೀನು ನೋಡುವಿಯೋ ಆತನೇ ಪವಿತ್ರಾತ್ಮದ ಸ್ನಾನವನ್ನು ಕೊಡುವವನು ಎಂದು ತಾನೇ ನನಗೆ ಹೇಳಿದನು. ನಾನು ಅದನ್ನು ನೋಡಿ ಈತನೇ ದೇವಕುಮಾರನೆಂದು ಸಾಕ್ಷಿ ಕೊಟ್ಟಿದ್ದೇವೆ ಅಂದನು (ಯೋಹಾನ : 1:29-34). ಇನ್ನೂ ಹೆಚ್ಚು ಗಮನಾರ್ಹವಾಗಿ, ಪವಿತ್ರಾತ್ಮವು ಆತನ ಮೇಲೆ ಇಳಿದಾಗ ಮತ್ತು ತಂದೆಯಾದ ದೇವರು ಯೇಸುವಿನೊಂದಿಗೆ ಸಂತಸ ಗೊಂಡಿದ್ದಾನೆಂದು ಸಾಕ್ಷಿ ಹೇಳಿದಾಗ ಆತನ ದೀಕ್ಷಾಸ್ನಾನದ ಮಹತ್ವವನ್ನು ನಾವು ನೋಡುತ್ತೇವೆ. ಯೇಸು ಸ್ನಾನ ಮಾಡಿಸಿಕೊಂಡ ಕೂಡಲೆ ನೀರಿನಿಂದ ಮೇಲಕ್ಕೆ ಬರಲು ಇಗೋ, ಆತನಿಗೆ ಆಕಾಶವು ತೆರೆಯಿತು; ಮತ್ತು ದೇವರ ಆತ್ಮ ಪಾರಿವಾಳ ಹಾಗೆ ಇಳಿದು ತನ್ನ ಮೇಲೆ ಬರುವದನ್ನು ಕಂಡನು. ಆಗ ಈತನು ಪ್ರಿಯನಾಗಿರುವ ನನ್ನ ಮಗನು, ಈತನನ್ನು ನಾನು ಮೆಚ್ಚಿದ್ದೇನೆ ಎಂದು ಆಕಾಶವಾಣಿ ಆಯಿತು (ಮತ್ತಾಯ 3:16-17; ಮಾರ್ಕ 1:10-11; ಲೂಕ 3:21-22). ಯೇಸು ಕ್ರಿಸ್ತನು ಪರಿಪೂರ್ಣವಾಗಿ ತನ್ನ

ವಿದೇಯತೆಯ ಮೂಲಕ ನೀತಿಯನ್ನು ಪೂರೈಸಿದನು. ಆದರೂ, ಆತನ ದೀಕ್ಷಾಸ್ನಾನದಲ್ಲಿ ಎಲ್ಲಾ ಸದಾಚಾರಗಳನ್ನು ಪೂರೈಸಿದ ಮತ್ತೊಂದು ಸಾಧನೆಯಿದೆ.

## ಯೇಸುಕ್ರಿಸ್ತನು ನಮಗೆ ಉದಾಹರಣೆ ಕೊಟ್ಟನು

ಆತನ ದೀಕ್ಷಾಸ್ನಾನದಿಂದ, ಯೇಸು ನಮಗೆ ಒಂದು ಉದಾಹರಣೆಯನ್ನು ಕೊಟ್ಟನು, ಅದನ್ನು ನಾವು ಅನುಸರಿಸಬೇಕು. ಮೊದಲನೆ ಯದಾಗಿ, ಯೇಸುಕ್ರಿಸ್ತನು ಕೇವಲ ಈ ಲೋಕಕ್ಕಾಗಿ ಸಾಯುವುದು ಮಾತ್ರವಲ್ಲದೆ, ಆದರೆ ಆತನು ಮರಣದಿಂದ ಪುನರುತ್ಥಾನ ಹೊಂದಿದ್ದಾನೆ ಎಂಬುದನ್ನು ನಾವು ಅರ್ಥಮಾಡಿಕೊಳ್ಳಬೇಕು (ಮತ್ತಾಯ 16:21; 28:5-7; ಅಪೋಸ್ತಲ 1:3; 2:23-24, 31-32). ಪುನರುತ್ಥಾನ ಹೊಂದಿದ ಮೇಲೆ, ದೇವರ ಬಲಗಡೆಯಲ್ಲಿ ಯೇಸು ಪರಲೋಕಕ್ಕೆ ಏರಿದನು (ಮಾರ್ಕ 16:9; ಯೋಹಾನ 20:17; ಅಪೋಸ್ತಲ 2:3 2-36, 7:55; ರೋಮ 5:34; ಎಫೆಸ 1:20; ಇಬ್ರಿಯ 8:1, 12:2;1 ಪೇತ್ರ 3:22). ಆದುದರಿಂದ ಯೇಸುಕ್ರಿಸ್ತನು ಸತ್ತನು, ಪುನರುತ್ಥಾನ ಹೊಂದಿದನು, ಆತನು ತಂದೆಯಾದ ದೇವರ ಬಲಗಡೆಯಲ್ಲಿ ಕೂತು ಕೊಂಡನು.

ಅದು ಶಾಶ್ವತ ಜೀವನಕ್ಕೆ ಆಧ್ಯಾತ್ಮಿಕ ಪುನರುತ್ಥಾನದ ಪ್ರಾರಂಭವಾಗಿತ್ತು. ಯೇಸುಕ್ರಿಸ್ತನು ಸತ್ತವರಲ್ಲಿ ಮೊದಲನವನು (ಕೊಲ್ಲೆಸ್ಸ 1:18; ಪ್ರಕಟನೆ 1:5). ಯೇಸುಕ್ರಿಸ್ತನು ಸತ್ತವರಲ್ಲಿ ಪ್ರಥಮ ಫಲವಾದನು (1 ಕೊರಿಂಥ 15:19-23), ಆತನು ನಮಗೆ ಪರಲೋಕವನ್ನು ನಮ್ಮೆಲ್ಲರಿಗೆ ಕೊಡುಗೆಯಾಗಿ ಕೊಟ್ಟಿದ್ದಾನೆ (ಅಪೋಸ್ತಲ 26:23). ರೋಮಾ 6:3-14 ಮತ್ತು 1 ಪೇತ್ರ 3:18-21, ಆತನ ಮರಣ ಮತ್ತು ಪುನರುತ್ಥಾನದ ಸಂಬಂದವನ್ನು ನಾವು ನೋಡುತ್ತೇವೆ. ನಮ್ಮ ಪಾಪಿ ಜೀವನದ ಆತ್ಮೀಕ ಮರಣ ಮತ್ತು ನಮ್ಮ ಆತ್ಮೀಕ ಪುನರುತ್ಥಾನ ನಮ್ಮ ಹಳೆಯ ಮನುಷ್ಯನ ಪಾಪವು ನೀರಿನಲ್ಲಿ ಮುಳುಗಿಸಿ, ಮತ್ತು ಆ ನೀರಿನಿಂದ ಹೊರ ಬರುವುದು ದೈವಿಕ ಜೀವನದ ಹೊಸ ಜೀವನಕ್ಕೆ ನಮ್ಮ ಪುನರುತ್ಥಾನವಾಗಿದೆ. ನೀವು ದೀಕ್ಷಾಸ್ನಾನದಲ್ಲಿ ಕ್ರಿಸ್ತನೊಂದಿಗೆ ಹೂಣಲಟ್ಟಿದ್ದರಿಂದಲೇ ಆ ಸುನ್ನತಿಯನ್ನು ಹೊಂದಿದಿರಿ. ಇದಲ್ಲದೆ ಆತನನ್ನು ಸತ್ತವರೊಳಗಿಂದ ಎಬ್ಬಿಸಿದ ದೇವರ ಸಾಮರ್ಥ್ಯದಲ್ಲಿ ನಂಬಿಕೆಯಿಡುವದರ ಮೂಲಕ ಅದರಲ್ಲಿ ಆತನ ಕೂಡ ಎದ್ದು ಬಂದಿರಿ. ಅಪರಾಧಗಳನ್ನು ಮಾಡುವದರಿಂದಲೂ ಸುನ್ನತಿಯಿಲ್ಲದ ಶರೀರ ಭಾವದಿಂದಲೂ ಸತ್ತವರಾಗಿದ್ದ ನಿಮ್ಮನ್ನು ಸಹ ದೇವರು ಕ್ರಿಸ್ತನೊಂದಿಗೆ ಬದುಕಿಸಿದ್ದಾನೆ (ಕೊಲೊಸ್ಸೆ 2:12-13; 3:1-4, ಇಬ್ರಿಯ 9:14-15; 10:19-25; ತೀತ 2:11-14).

ಒಬ್ಬ ವ್ಯಕ್ತಿಯು ನೀರಿನಿಂದ ಮತ್ತು ಆತ್ಮದಿಂದ ಮತ್ತೆ ಹುಟ್ಟಬೇಕು ಎಂದು ಹೇಳಿದಾಗ ಕ್ರಿಸ್ತನು ದೀಕ್ಷಾಸ್ನಾನವನ್ನು ಉಲ್ಲೇಖಿಸುತ್ತಾನೆ (ಯೋಹಾನ 3:3-5). ರಕ್ಷಣೆ ಹೊಂದಬೇಕಾದರೆ ನಾವು ಹೊಸದಾಗಿ ಹುಟ್ಟಬೇಕು, ಆತ್ಮೀಕ ಜೀವನ ದೀಕ್ಷಾಸ್ನಾನದ ಮೂಲಕ ಮತ್ತು ನಮ್ಮೊಳಗೆ ವಾಸ ಮಾಡುವುದಕ್ಕೆ ಪವಿತ್ರಾತ್ಮನನ್ನು ಸ್ವೀಕಾರ ಮಾಡುವುದು (ಅಪೋಸ್ತಲ 2:38; 1 ಕೊರಿಂಥ 6:19). ದೀಕ್ಷಾಸ್ನಾನವು ಆತನ ಮರಣ, ಹೂಣಲ್ಪಡುವಿಕೆ, ಪುನರುತ್ಥಾನಕ್ಕೆ ಹೋಲಿಕೆಯಾಗಿದೆ.

ಇದರಲ್ಲಿ ನಾವು ಆತನ ದೈಹಿಕ, ಸಾರ್ವಜನಿಕ ಸೇವೆಯನ್ನು ಪರಿಗಣಿಸ ಬಹುದು. ಇದು ದೀಕ್ಷಾಸ್ನಾನದ ಮೂಲಕ ಒಂದು ರೀತಿಯ ಮರಣ, ಸಮಾಧಿ ಮತ್ತು ಪುನರುತ್ಥಾನದಲ್ಲಿ ಪ್ರಾರಂಭವಾಯಿತು, ಮತ್ತು ಅದು ಆತನ ನಿಜವಾದ ಮರಣ, ಸಮಾಧಿ ಮತ್ತು ಪುನರುತ್ಥಾನದಲ್ಲಿ ಕೊನೆಗೊಂಡಿತು. ಆಮೇಲೆ ಆತನು ಪರಲೋಕಕ್ಕೆ ಏರಿ ಹೋದನು. ಆತನು ಮುಂಚೂಣಿಯಲ್ಲಿದ್ದಾನೆ, ಪರಲೋಕಕ್ಕೆ ದಾರಿಯನ್ನು ತೋರಿಸಿದನು (ಇಬ್ರಿಯ 6:20), ಆತನು ನಮಗಾಗಿ ಸಮರ್ಪಿಣೆಯ ಮಾರ್ಗ ತೋರಿಸಿದನು (ಇಬ್ರಿಯ 10:19-20). ಆತನು ನಮ್ಮ ನಂಬಿಕೆಯ ಲೇಖಕನು ಮತ್ತು ನಿತ್ಯತ್ವದ ರಕ್ಷಣೆಯಾಗಿದ್ದಾನೆ (ಇಬ್ರಿಯ 5:5; 12:2 ).

ನಮಗೆ ರಕ್ಷಣೆ ಬೇಕೆಂದರೆ, ನಾವು ಆ ಮಾರ್ಗವನ್ನು ಅನುಸರಿಸಬೇಕು. ಆತನ ಉದಾಹರಣೆಯನ್ನು ಅನುಸರಿಸಬೇಕು. ಯೇಸುಕ್ರಿಸ್ತನ ಪಾಪರಹಿತನಾಗಿದ್ದನು. ಆದುದರಿಂದ ಆತನು ಯಾವುದೇ ಪಾಪಗಳನ್ನು ಪಶ್ಚಾತ್ತಾಪಪಡುವ ಅಥವಾ ಒಪ್ಪಿಕೊಳ್ಳುವ ಅಗತ್ಯವಿರಲಿಲ್ಲ. ಎಲ್ಲಾ ನೀತಿಯನ್ನು ಪೂರೈಸಲು ಆತನ ದೀಕ್ಷಾಸ್ನಾನ ಪಡೆಯ ಬೇಕಾಗಿತ್ತು. ಆದಾಗ್ಯೂ, ನಾವು ನಂಬಬೇಕು (ಯೋಹಾನ 1:12; 8:24; ಅಪೋಸ್ತಲ 16:21; 1 ಕೊರಿಂಥ 1:21; ಗಲಾತ್ಯ 3:22; ಇಬ್ರಿಯ 10 :39; 11:6). ನಾವು ನಮ್ಮ ಪಾಪಗಳಿಗಾಗಿ ಪಶ್ಚಾತ್ತಾಪ ಪಡಬೇಕು (ಲೂಕ 13:5; 2 ಕೊರಿಂಥ 7:10; 2 ಪೇತ್ರ 2:9). ನಾವು ನಮ್ಮ ನಂಬಿಕೆಯನ್ನು ಕ್ರಿಸ್ತನಲ್ಲಿ ಅಂಗೀಕಾರ ಮಾಡಬೇಕು (ಮತ್ತಾಯ 10 : 32; ರೊಮ 10:9-10). ಮತ್ತು ಯೇಸುಕ್ರಿಸ್ತನ ಆಜ್ಞೆಯ ಮೇರೆಗೆ ನಾವು ನೀರಿನಲ್ಲಿ ದೀಕ್ಷಾಸ್ನಾನ ಮಾಡಿಸಿಕೊಳ್ಳಬೇಕು (ಮತ್ತಾಯ 28:18-20; ಮಾರ್ಕ 16:16; ಅಪೋಸ್ತಲ 2:38-42; 8:12; 10:48; 16:33; 22:16; ರೊಮ 6:33; 1 ಕೋರಿಂಥ 12:13; ಗಲಾತ್ಯ 3:26-29). ದೀಕ್ಷಾಸ್ನಾನದ ನಂತರ, ಅಂತಿಮ ಪುನರುತ್ಥಾನದ ನಿರೀಕ್ಷೆಯಲ್ಲಿ ಮತ್ತು ದೈವಿಕ ಜೀವನವನ್ನು ನಡೆಸಲು ನಾವು ಪ್ರಯತ್ನಿಸಬೇಕು. ಯಾವಾಗ ನಾವು ಯೇಸುಕ್ರಿಸ್ತನ ಜೊತೆಗೆ ಪರಲೋಕಕ್ಕೆ ಹೋಗುವಾಗ (ಯೋಹಾನ 5:28-29; 1 ಕೊರಿಂಥ 15:42-58; ಗಲಾತ್ಯ 5:5; ಫಿಲಿಪ್ಪಿಯ 1:20; 3:9-21; ಕೊಲ್ಲೆಸ್ಸ 1:5, 27;1 ಥೆಸಲೋನಿಕ 4:13-18; ಇಬ್ರಿಯ 3:6).

ಆತನ ಸಾರ್ವಜನಿಕ ಸೇವೆಯ ಆರಂಭದಲ್ಲಿ, ಎಲ್ಲಾ ನೀತಿಯನ್ನು ಪೂರೈಸುವದಕ್ಕಾಗಿ ಯೇಸುಕ್ರಿಸ್ತನು ದೀಕ್ಷಾಸ್ನಾನ ತೆಗೆದುಕೊಂಡನು.ಇದನ್ನು ಮಾಡುವದರಿಂದ ದೇವರಿಗೆ ವಿಧೇಯು ನಾದನು,ಆತನ ತಂದೆಯು ನಾವು ಅನುಸರಿಸ ಬೇಕೆಂದು ಉದಾಹರಣೆಯನ್ನು ಕೊಟ್ಟನು. ಆತನನ್ನು ಈ ಲೋಕದ ಯಾತ್ರೆಯ ಕೊನೆಯ ಸೇವೆಯಲ್ಲಿ, ಆತನು ಎಲ್ಲಾ ನೀತಿಯನ್ನು ಪೂರೈಸಿದನು. ನಮಗಾಗಿ ಆತನ ತ್ಯಾಗದ ಲಾಭವನ್ನು ಪಡೆಯಲು ನಾವು ಬಯಸಿದರೆ, ನಾವು ಆತನ ಮಾದರಿಯನ್ನು ಅನುಸರಿಸಬೇಕು ಮತ್ತು ವಿಧೇಯರಾಗಿರಬೇಕು (1 ಪೇತ್ರ 1:14).

ನನ್ನನ್ನು ಸ್ವಾಮಿ, ಸ್ವಾಮಿ ಅನ್ನುವವರೆಲ್ಲರು ಪರಲೋಕ ರಾಜ್ಯದಲ್ಲಿ ಸೇರುವರೆಂದು ನೆನಸಬೇಡಿರಿ; ಪರಲೋಕದಲ್ಲಿರುವ ನನ್ನ ತಂದೆಯ ಚಿತ್ತದಂತೆ ನಡೆಯುವವನೇ ಪರಲೋಕ ರಾಜ್ಯಕ್ಕೆ ಸೇರುವನು (ಮತ್ತಾಯ 7:21).

ಆದಕಾರಣ ನೀವು ಕ್ರಿಸ್ತನೊಂದಿಗೆ ಎಬ್ಬಿಸಲ್ಪಟ್ಟಿರುವದರಿಂದ ಮೇಲಿರುವವುಗಳನ್ನು ಹುಡುಕಿರಿ; ಅಲ್ಲಿ ಕ್ರಿಸ್ತನು ದೇವರ ಬಲಗಡೆಯಲ್ಲಿ ಆಸನಾರೂಢನಾಗಿದ್ದಾನೆ (ಕೊಲೊಸ್ಸೆ 3:1).

❖ ❖ ❖

**TAX EXEMPTION / ತೆರಿಗೆ ವಿನಾಯಿತಿ**

ನಾವು ಬಡ ಹಾಗೂ ಅನಾಥ ಮಕ್ಕಳು, ವಿಧವೆಯರು ಮತ್ತು ದಿಕ್ಕಿಲ್ಲದಂತವರಿಗೆ ವಿದ್ಯೆ ಹಾಗೂ ಪ್ರತಿನಿತ್ಯ ಊಟವನ್ನು ಒದಗಿಸುವುದರಲ್ಲಿ ಸಹಾಯ ಮಾಡುತ್ತಿದ್ದೇವೆ. ಇಂಥ ಪ್ರೀತಿ ಭರಿತ ಕಾರ್ಯಕ್ರಮದಲ್ಲಿ ನೀವು ಸಹ **Echo of His Call Educational Trust** ಮೂಲಕ ಭಾಗಿಗಳಾಗ ಬಹುದು! ಯಾವುದೇ ಸಂಸ್ಥೆ ಅಥವಾ ವ್ಯಕ್ತಿ ಕಳುಹಿಸುವ ದಾನಗಳಿಗೆ ಭಾರತೀಯ ತೆರಿಗೆ ಅಧಿನಿಯಮ 80-ಜಿ ರ ಅನ್ವಯ ತೆರಿಗೆ ರಿಯಾಯಿತಿ ಹೊಂದಿಕೊಳ್ಳಬಹುದು, ಇದಕ್ಕೆ ತಕ್ಕಂತಹ ರಶೀದಿಗಳನ್ನು ನಿಮಗೆ ಕೊಡಲಾಗುವುದು. ಚೆಕ್ ಅಥವಾ ಡ್ರಾಫ್ಟ್‌ಗಳನ್ನು **Echo of His Call Educational Trust** ಶಿರೋನಾಮೆಯಲ್ಲಿ ಬರೆದು ಈ ಕೆಳಗಿನ ವಿಳಾಸಕ್ಕೆ ಕಳುಹಿಸಿ ಕೊಡಿರಿ :

| | |
|---|---|
| Name of the Account | : Echo of His Call Educational Trust |
| Name of the Bank | : State Bank of India |
| Branch | : Triplicane, Chennai - 600 005 |
| Bank Account Number | : 10232923805 |
| IFSC Code | : SBIN 0000249 |



# ಹಳ್ಳದಿಂದ ಅರಮನೆಗೆ
# PIT TO PALACE

(ಪಾಸ್ಟರ್ ಎಸ್. ಸ್ಯಾಮ್ ಸೆಲ್ವರಾಜ್‌ರವರ ಜೀವನದ ಅನುಭವಗಳು)

"ಭೂಮ್ಯಾಕಾಶಗಳನ್ನು ನಿರ್ಮಿಸಿದ ಯೆಹೋವನಿಂದಲೇ ನನ್ನ ಸಹಾಯವು ಬರುತ್ತದೆ" (ಕೀರ್ತನೆ 121:2)

## ಮಾತನಾಡುವ ಕರ್ತನಾದ ಯೇಸುಕ್ರಿಸ್ತನು!

1982ನೇಯ ವರ್ಷವಾಗಿತ್ತು! ದೇವರ ಕೃಪೆಯು ಎಂದಿಗೂ ಬದಲಾಗುವುದಿಲ್ಲ! ಆತನ ಕರೆಯುವಿಕೆಯೂ ಕೂಡ ಬದಲಾಗುವುದಿಲ್ಲ!!! ದೇವರು ವರಗಳನ್ನೂ ಅನುಗ್ರಹಿಸಿದ್ದಕ್ಕೂ ಜನರನ್ನು ಕರೆದದ್ದಕ್ಕೂ ಪಶ್ಚಾತ್ತಾಪ ಪಡುವವನಲ್ಲ (ರೋಮ 11:29). ಆದರೆ ಪರಿಸ್ಥಿತಿಯು ತಲೆ ಕೆಳಗಾಗಿತ್ತು. ವಾಸ ಮಾಡುವದಕ್ಕೆ ಯಾವುದೇ ಸಹಾಯಕರ ಸ್ಥಳವು ಇರಲಿಲ್ಲ. ಸಹಾಯ ಮಾಡಲಿಕ್ಕೆ ಯಾರು ಇರಲಿಲ್ಲ. ಸೇವೆಗೆ ಅನೇಕ ವಿರೋಧಗಳು ಇದ್ದವು. ತಿರಸ್ಕಾರ ಮತ್ತು ಮುದ್ರಣಗಳು ಇದ್ದವು. ಹಣಕಾಸಿನ ಪರಿಸ್ಥಿತಿಯು ಕಷ್ಟಕರವಾಗಿತ್ತು. ಜನರನ್ನು ಬೆಂಬಲಿಸುವ ಕೊರತೆ ಇತ್ತು ಮತ್ತು ನಾವು ಹೇಳುವದನ್ನು ಕೇಳಲು ಯಾರು ಇರಲಿಲ್ಲ. ಹತ್ತಿರ ಗೋಡೆಯಲ್ಲಿ ಈ ರೀತಿಯಾಗಿ ಹೇಳಿಕೆಯಿತ್ತು. ಧರ್ಮವನ್ನು ಬದಲಾಯಿಸುವ ಡೇರೆ ಮನುಷ್ಯ ಓಹ್! ಜನರು ಹುಷಾರಾಗಿರಿ!!!.

ನಾನು ಕಳೆದುಹೋಗಿದ್ದೆ, ನಡೆಸುವಿಕೆ ಯಿಲ್ಲದೆ ಮತ್ತು ಏನು ಮಾಡಬೇಕೆಂದು ಗೊತ್ತಿರಲಿಲ್ಲ. ನಿರಾಶೆಯ ಮಾತುಗಳು ನನ್ನ ಕಿವಿಗೆ ಬೀಳುತ್ತಿದ್ದವು. ನಿನಗೆ ವಿರೋಧವಾಗಿರುವ ಈ ಸ್ಥಳವಿದೆ ಮತ್ತು ನಗರದಿಂದ 25 ಕಿಲೋಮೀಟರ್ ದೂರದಲ್ಲಿರುವ ಸ್ಥಳಕ್ಕೆ ಹೋಗು. ಸಮಯವನ್ನು ವ್ಯರ್ಥ ಮಾಡಬೇಡ. ಇನ್ನೂ ಈ ತರಹದ ವಿರೋಧಗಳು ಮತ್ತು ಸಲಹೆಗಳು ಕೇಳಿ ಬಂದವು. ನಾನು ಒತ್ತಾಯದ ಮೇರೆಗೆ ನಿರ್ಧಾರ ತೆಗೆದು ಕೊಳ್ಳಬೇಕಾಯಿತು.

ಒಂದು ದಿನ ರಾತ್ರಿ ನಿದ್ರೆಯಿಲ್ಲದೆ ಮತ್ತು ನಿರಾಶೆಯಾಗಿದ್ದೆ. ಯಾರು ನನಗೆ ಸಲಹೆ ಕೊಡಲಿಕ್ಕೆ ಇರಲಿಲ್ಲ. ನನ್ನ ಸುತ್ತಲೂ ಇರುವ ಜನರು ವಿರೋಧವಾಗಿ ಆಲೋಚನೆ ಮಾಡಿದರು. ನಾನು ಹೇಳುವದನ್ನು ಕೇಳುವ ಸ್ಥಿತಿಯಲ್ಲಿಲ್ಲದ ಮತ್ತು ಯೋಚಿಸಲು ಮತು ಅರ್ಥಪೂರ್ಣ ಉತ್ತರವನ್ನು ನೀಡಲು ಮನಸ್ಸಿಲ್ಲದ ಜನರಿಂದ ನಾನು ಸುತ್ತುವರಿದಿದ್ದೇನೆ. ನಾನು ಬೆಳಿಗಿನ ಜಾವ 4 ಘಂಟೆಗೆ ಮೊಣಕಾಲಿನಲ್ಲಿ ನಿಲ್ಲಬೇಕೆಂದು ನಿರ್ಧಾರ ಮಾಡಿಕೊಂಡೆನು. ನಾನು ಮುಂಜಾನೆ ಮೊಣ ಕಾಲಿನಲ್ಲಿದ್ದರೂ ನನ್ನ ಒತ್ತಡದ ಸಮಸ್ಯೆ ಗಳಿಂದಾಗಿ ನನ್ನ ಬಾಯಿಂದ ಯಾವುದೇ ಮಾತು ಹೊರ ಬರಲಿಲ್ಲ. ಅದಾಗ್ಯೂ, ನನ್ನ ಹೃದಯವು ಜೀವಿಸುವ ಕರ್ತನಾದ ಯೇಸುವಿನೊಂದಿಗೆ ಇತ್ತು. ನನ್ನ ಧ್ವನಿಯು ಸ್ವರ್ಗವನ್ನು ತಲುಪುತ್ತಿದೆ ಎಂದು ನಾನು ದೃಶೀಕರಿಸಲು ಸಾಧ್ಯವಾಯಿತು ಮತ್ತು ನನ್ನ ಮನವಿಯನ್ನು ನಗುತ್ತಾ ಸ್ವೀಕರಿಸಿದ ಕರ್ತನ ಕೆಲಸ ಮಾಡಲು ಪ್ರಾರಂಭಿಸಿದೆನು.

ಸಮಯ ಹೇಗೆ ಹೋಯಿತು ಎಂದು ನನಗೆ ಅರ್ಥ ಮಾಡಿಕೊಳ್ಳಲಿಕ್ಕೆ ಆಗುತ್ತಿಲ್ಲ. ನನಗೆ ಊಟ ಮತ್ತು ನೀರು ಇರಲಿಲ್ಲ! ಆದರೆ ಆ ದಿನ ಸಂಜೆ 5:30ಕ್ಕೆ ನನ್ನ ಸ್ನೇಹಿತ ಮತ್ತು ನಮ್ಮ ಸಹಾಯಕ ಸಂಪಾದಕ (ಆಂಗ್ಲಭಾಷೆ), ಆತನ ಕರೆಯ ಪ್ರತಿಧ್ವನಿಯ ಪತ್ರಿಕೆ ಸಹೋ. ಪಾಲ್‌ರಾಜ್ ಬಂದರು. ಆ ಸಮಯದಲ್ಲಿ ನಾನು ಮೊಣಕಾಲಿನ ಮೇಲೆ ಇದ್ದೆ, ಆತನು ಬರುವ ಶಬ್ದವನ್ನು ಕೇಳಿ ಆತನನ್ನು ಭೇಟಿಯಾದೆ.

ನಾನು ದೇಹದಲ್ಲಿ ಬಲಹೀನನಾದಗ್ಯೂ ಆದರೆ ನನ್ನ ಮುಖವು ಪ್ರಕಾಶ ಮಾನವಾಗಿತ್ತು. ನನ್ನ ಮುಖವು ತಾಜ ಮತ್ತು ಹೊಳೆಯುವದನ್ನು ಆತನು ನೋಡಿ ಓಹ್, ಸಹೋದರ ನಿನ್ನ ಮುಖ ಎಷ್ಟು ತಾಜವಾಗಿದೆ? ಏನಾದರು ಶುಭಸಂದೇಶ ವಿದೆಯಾ? ಎಂದು ಕೇಳಿದನು. ನಾನು ಬೆಳಿಗ್ಗೆ ಗಂಟೆಯ ಗಡಿಯಾರದಿಂದ ನನ್ನ ಮೊಣ ಕಾಲುಗಳಲ್ಲಿದ್ದೇನು ಎಂದು ಹೇಳಿದೆ, ಯಾಕೆಂದರೆ ಒಂದು ಪ್ರಮುಖ ವಿಷಯವು ನನ್ನನ್ನು ದೀರ್ಘಕಾಲ ಒತ್ತುತ್ತಾಯಿದೆ. ಮಾತುಗಳು ಬರುತ್ತಿರಲಿಲ್ಲ ಆದರೆ ನಾನು ನನ್ನ ಮನಸ್ಸಿನಲ್ಲಿ ದೇವರಿಗೆ ಪ್ರಾರ್ಥನೆ ಮಾಡಿದೆನು.

ನಮ್ಮ ಸಂದರ್ಶನ ವೇಳೆಯಲ್ಲಿ ತಕ್ಷಣ ಆತನು ಒಂದು ಮಾತು ಹೇಳಿದನು, ಸಹೋದರ ನಮ್ಮ ದೇವರು ನಿಮಗೆ ಎಷ್ಟು ಒಳ್ಳೆಯನು! ನಾವು ಒಟ್ಟಿಗೆ ಹಳ್ಳಿಯ ಶಾಲೆಯಲ್ಲಿ ಓದಿದೆವು ಆದರೆ ದೇವರು ನಿಮ್ಮನ್ನು ಚೆಪಕ್ಕೆ ಕರೆದುಕೊಂಡು ಬಂದಿದ್ದಾನೆ. ರಾಜ್ಯದ ಪ್ರಧಾನ ಕಛೇರಿಗೆ ಸಮೀಪವಿರುವ ಸ್ಥಳ. ತಲುಪದ ಮತ್ತು ಕಷ್ಟಕರವಾದ ಪ್ರದೇಶಕ್ಕೆ ಸುವಾರ್ತೆಯನ್ನು ಸಾರುವಂತೆ ಆತನು ನಿಮ್ಮನ್ನು ಈ ಸ್ಥಳದಲ್ಲಿ ಇರಿಸಿದ್ದಾನೆ. ಇದು ಎಷ್ಟು ಅದ್ಭುತವಲ್ಲ? ಯೆಶಾಯ 2:3 ಮತ್ತು ಮಿಕ 4:2 ಹೇಳುತ್ತದೆ. ಯಾಕೆಂದರೆ ಚಿಯೋನ್‌ನಿಂದ ನ್ಯಾಯ ಮತ್ತು ನಾಲ್ಕನೆಯದು ಯೆರುಸಲೇಮಿನಿಂದ ಕರ್ತನ ಮಾತು ಹೋಗುತ್ತದೆ. ಆದುದರಿಂದ ದೇವರು ಈ ಪ್ರದೇಶಕ್ಕೆ ಮತ್ತು ದೇಶದ ಎಲ್ಲಾ ಭಾಗಗಳಿಗೆ ನಿಮ್ಮ ಮೂಲಕ ಜೀವಂತ ಬೆಳಕನ್ನು ನೀಡಲಿದ್ದಾನೆ. ಎಂತಹ ಅದ್ಭುತ! ನನ್ನ ಸಮಸ್ಯೆಗೆ ಪರಿಹಾರವನ್ನು ನೀಡಲು ದೇವರು ತನ್ನ ಮಗನನ್ನು ಸರಿಯಾದ ಸಮಯದಲ್ಲಿ ಕರೆತಂದು ಮತ್ತು ದೇವರು ನನ್ನ ಪ್ರಾರ್ಥನೆಗೆ ಉತ್ತರಿಸಿದನು.

ಪ್ರೀತಿಯ ದೇವಮಕ್ಕಳೆ, ನೀವು ಕಷ್ಟದ ಪರಿಸ್ಥಿತಿಯಲ್ಲಿ ಹಾದು ಹೋಗುತ್ತಾ ಇದ್ದೀರಾ? ನಿಮ್ಮ ಹೃದಯವನ್ನು ಕಳವಳಗೊಳಿಸಬೇಡಿರಿ. ಅರಣ್ಯದಲ್ಲಿ ಕೂಡ ದೇವರು ಹಾಗರಳ ಕಠಿಣ ಪರಿಸ್ಥಿತಿಯನ್ನು ನೋಡಿದನು. ಆ ಹುಡುಗನ ಮೊರೆಯು ದೇವರಿಗೆ ಕೇಳಿಸಿತು; ದೇವದೂತನು ಆಕಾಶದಿಂದ ಹಾಗರಳನ್ನು ಕರೆದು—ಹಾಗರಳೇ, ನಿನಗೇನಾಯಿತು? ಅಂಜಬೇಡ; ಆ ಹುಡುಗನು ಬಿದ್ದಿರುವ ಸ್ಥಳದಿಂದಲೇ ಅವನ ಶಬ್ದವು ದೇವರಿಗೆ ಕೇಳಿಸಿತು (ಆದಿಕಾಂಡ 21:17). ಪ್ರಾರ್ಥನೆಯಲ್ಲಿ ಮುಂದುವರಿಯಿರಿ. ದೇವರು ನಿಮ್ಮ ಜೀವಿತದಲ್ಲಿ ಒಳ್ಳೆಯದನ್ನು ಮಾಡುತ್ತಾನೆ! ಒಂದು ಕಾಲ ಉಂಟು, ನಿನ್ನ ನಿರೀಕ್ಷೆಯು ನಿರರ್ಥಕವಾಗದು (ಜ್ಞಾನೋಕ್ತಿಗಳು 23:18).

❖ ❖ ❖

## ಪ್ರೀತಿಯ ಮನವಿ

ಸಿಬ್ಬಂದಿಯ ವೇತನ, ಕಾಗದದ ಖರೀದಿಯ ವೆಚ್ಚಗಳು ಮತ್ತು ಪ್ರಯಾಣ ವೆಚ್ಚಗಳಂತಹ ಹಲವಾರು ಅಗತ್ಯಗಳನ್ನು ಪೂರೈಸಲು ನಾವು ಕಷ್ಟಪಡುತ್ತಿದ್ದೇವೆ ಎಂದು ನಿಮ್ಮಲ್ಲರಿಗೆ ತಿಳಿದಿದೆ. ಸಾಮಾನ್ಯವಾಗಿ ನಾವು ನಮ್ಮ ಹಣಕಾಸಿನ ಅಗತ್ಯತೆಗಳಿಗಾಗಿ ನಾವು ಯಾರನ್ನು ಕೇಳುವುದಿಲ್ಲ. ಆದರೆ ನಿಜವಾಗಿ ಯಾರು ನಮ್ಮ ಸೇವೆಯನ್ನು ಪ್ರೀತಿಸುತ್ತಾರೋ ನಿಮ್ಮ ಕಾಣಿಕೆಗಳನ್ನು ಮಣಿ ಆರ್ಡರ್, ಚೆಕ್ ಅಥವಾ ಡಿಮೆಂಡ್‌ಡ್ರಾಫ್, ಘೋನ್ ಪೇ, ನೆಫ್ಟ್ ಅಥವಾ ಇನ್ನು ಬೇರೆ ಕ್ರಮಗಳ ಮೂಲಕ ಈ ಸೇವೆಗೆ ಸಹಾಯ ಮಾಡಿರಿ. ಕರ್ತನು ನಿಮ್ಮನ್ನು ನಿಶ್ಚಯವಾಗಿ ಆಶೀರ್ವಾದ ಮಾಡುತ್ತಾನೆ.
ವಿವರಗಳಿಗೆ : +91 98412 71858

– ಸಂಪಾದಕರು, ಆತನ ಕರೆಯ ಪ್ರತಿಧ್ವನಿ

RNI NO. 70107/98, Postal Regn. No. TN/CH (C)/195/21-23 WPP NO. TN/PMG(CCR)/WPP-219/21-23

# ಕರೆಯ ಪ್ರತಿಧ್ವನಿ

(16 ಭಾಷೆಗಳಲ್ಲಿ ಪ್ರಕಟವಾಗುವುದು)

**ವಾರ್ಷಿಕ ಸದಸ್ಯತ್ವ ರೂ. 100/-**

**ಆಜೀವ ಸದಸ್ಯತ್ವ ರೂ. 2000/-**

**ಕರೆಯ ಪ್ರತಿಧ್ವನಿ ಮಾಸಪತ್ರಿಕೆಯು** ಪ್ರತಿ ತಿಂಗಳು ಬೇಕೆನ್ನುವವರು ದಯವಿಟ್ಟು ನಮಗೆ ಬರೆಯಿರಿ. ದೇವಜನರಾದ ನಿಮ್ಮಂತವರು ಉದಾರ ವಾಗಿ ಕಳುಹಿಸಿಕೊಡುವ **ದಾನಗಳಿಂದಲೇ ಈ ಸೇವೆ ಮುಂದು ವರಿಯುತ್ತದೆ.**

**ಕರೆಯ ಪ್ರತಿಧ್ವನಿ ಪತ್ರಿಕೆಯು 16 ಭಾಷೆಗಳಲ್ಲಿ ನಮ್ಮ ವೆಬ್‌ನಲ್ಲಿ ಉಪಬಲ್ಧ.**

**ದಯಮಾಡಿ ನಿಮ್ಮ ದೂರವಾಣಿ / ಮೊಬೈಲ್ ಸಂಖ್ಯೆ ಇಲ್ಲವೆ ಇ-ಮೈಲ್ ವಿಳಾಸವನ್ನು ಕಳುಹಿಸಿ ಕೊಡಿ.**

**ನಿಮ್ಮ ಪತ್ರಗಳು, ಹಣ ಸಹಾಯ (ಡಿ. ಡಿ., / ಚೆಕ್, / ಎಂ.ಓ.) ಮುಂತಾದವುಗಳನ್ನು** Echo of His Call Ministries **ಶಿರೋನಾಮೆ ಗಳಲ್ಲಿ ಈ ಕೆಳಕಂಡ ವಿಳಾಸಕ್ಕೆ ಕಳುಹಿಸಿ ಕೊಡಬಹುದು. ನಮ್ಮ ಬ್ಯಾಂಕಿನ ಖಾತೆಯ ವಿವರಗಳು ಈ ಕೆಳ ಕಂಡಂತಿವೆ. ನೀವು ಕಳುಹಿಸುವ ದಾನಗಳ ವಿವರಗಳನ್ನು ದಯವಿಟ್ಟು ನಮಗೆ ತಿಳಿಸಿರಿ. ಬ್ಯಾಂಕ್, ಉಪಶಾಖೆ, ಹೆಸರು, ಖಾತೆಯ ಸಂಖ್ಯೆ :**

**ECHO OF HIS CALL**
10, Mohammed Abdullah II Street, Chepauk, Chennai - 600 005. India
**Ph: (+91-44) 2852 8282, 2852 9293, 2854 7766,**
**Cell: (+91) 98410 71852, 95661 31858**
**E-mail: sam@echoofhiscall.org / biblecor@yahoo.co.in.**
**Website: www.echoofhiscall.org / www.echoofhiscall.com**

# ದಯವಿಟ್ಟು ನಮ್ಮ ಸೇವೆಯ ಕುರಿತು ಪ್ರಾರ್ಥಿಸಿರಿ

**Please Pray for our Ministries at the Headquarters**

1. ಪ್ರಾರ್ಥನಾ ಸೇವೆ : 24 ತಾಸು
2. ಬಿಬ್ಲಿಯೋಕೋರ್ - ಬೈಬಲ್ ಕರಸ್ಪಾಂಡೆನ್ಸ್ ಕೋರ್ಸ್, ಇಂಗ್ಲೀಷ್, ತಮಿಳು ಮತ್ತು ಹಿಂದಿ
3. ಕರೆಯ ಪ್ರತಿಧ್ವನಿ ಮಾಸ ಪತ್ರಿಕೆ : ಕನ್ನಡ, ಇಂಗ್ಲೀಷ್, ತಮಿಳ್, ಮಲಯಾಳಂ, ತೆಲುಗು, ಹಿಂದಿ, ಸಿನ್ಹಾಳಿ, ಮರಾಠಿ, ಗುಜರಾತಿ, ಬೆಂಗಾಳಿ, ಓರಿಯಾ, ನೇಪಾಳಿ, ಅಸ್ಸಾಮಿ, ಪಂಜಾಬಿ, ಉರ್ದು ಮತ್ತು ಆಫ್ರಿಕಾನ್ಸ್
4. ನೆಹೆಮಿಯಾ ಬೈಬಲ್ ಕಾಲೇಜ್ (ಎರಡು ಕೇಂದ್ರಗಳು)
5. ಥಿಯೋಲೋಜಿಕಲ್ ಕರಸ್ಪಾಂಡೆನ್ಸ್ ಕೋರ್ಸ್ : ಇಂಗ್ಲೀಷ್ ಮತ್ತು ತಮಿಳು
6. ಪರಮಾದೇಶದಲ್ಲಿ ಪಾಲುಗಾರರು
7. ತರಬೇತಿ ಕಾರ್ಯಕ್ರಮಗಳು
8. ಕರಪತ್ರ ಹಾಗೂ ಅನುಕರಣ ಸೇವೆ
9. ಸೆಂಟ್ ಪಾಲ್ಸ್ ಮೆಟ್ರಿಕ್ಯೂಲೇಷನ್ ಸ್ಕೂಲ್ — ಗ್ರಾಮೀಣ ಪ್ರದೇಶದ ಪ್ರೌಢ ಶಾಲೆ
10. ಸುವಾರ್ತಾ ಮುದ್ರಣಾಲಯ - ಪ್ರಕಾಶನ
11. ಸಬ್ಬತ್ ಶಾಲೆ — ಭಾನುವಾರ ಬೆಳಿಗ್ಗೆ 08:30 ಗಂಟೆಗೆ
12. ತಮಿಳು ಭಾಷೆಯಲ್ಲಿ ಆರಾಧನೆ — ಮುಂಜಾನೆ 05:00, 07:00 ಮತ್ತು 10:00 ಗಂಟೆಗೆ
13. ತೆಲುಗು ಭಾಷೆಯಲ್ಲಿ ಆರಾಧನೆ — ಭಾನುವಾರ ಸಾಯಂಕಾಲ 04:00 ಗಂಟೆಗೆ
14. ಹಿಂದಿ ಭಾಷೆಯಲ್ಲಿ ಆರಾಧನೆ — ಭಾನುವಾರ ಸಾಯಂಕಾಲ 05:00 ಗಂಟೆಗೆ
15. ಮಲಯಾಳಂ ಭಾಷೆಯಲ್ಲಿ ಆರಾಧನೆ — ಭಾನುವಾರ ಸಾಯಂಕಾಲ 05:00 ಗಂಟೆಗೆ
16. ಇಂಗ್ಲೀಷ್ ಹಾಗೂ ತಮಿಳು ಭಾಷೆಯಲ್ಲಿ ಆರಾಧನೆ — ಭಾನುವಾರ ಸಾಯಂಕಾಲ 06:00 ಗಂಟೆಗೆ
17. ಕರಪತ್ರ ವಿತರಣೆ — ಭಾನುವಾರ ಮಧ್ಯಾಹ್ನ 02:30 ಗಂಟೆಗೆ
18. ಸಭಾ ಪಾಲಕರಿಗೆ ಮಾರ್ಗದರ್ಶನ — ಭಾನುವಾರ ಸಾಯಂಕಾಲ 04:00 ಗಂಟೆಗೆ
19. ಮಹಿಳೆಯರ ಪ್ರಾರ್ಥನಾ ಕೂಟ — ಬುಧವಾರ ಸಾಯಂಕಾಲ 05:30 ಗಂಟೆಗೆ
20. ಮಧ್ಯ ವಾರದ ಆರಾಧನೆ — ಬುಧವಾರ ಸಾಯಂಕಾಲ 06:30 ಗಂಟೆಗೆ
21. ಪುರುಷರಿಗಾಗಿ ಪ್ರಾರ್ಥನಾ ಕೂಟ — ಶುಕ್ರವಾರ ಸಾಯಂಕಾಲ 06:30 ಗಂಟೆಗೆ
22. ಶನಿವಾರ ಆರಾಧನೆ — ಶನಿವಾರ ಸಾಯಂಕಾಲ 06:00 ಗಂಟೆಗೆ
23. ಕಾರ್ಮಿಕರ ಕೂಟ — ಶನಿವಾರ ಸಾಯಂಕಾಲ 06:00 ಗಂಟೆಗೆ
24. ಗೃಹ ಪ್ರಾರ್ಥನೆಗಳು — ಮಂಗಳವಾರ ಹಾಗೂ ಗುರುವಾರ ಸಾಯಂಕಾಲ 06:30 ಗಂಟೆಗೆ
25. ವಿಶೇಷ ಪವಿತ್ರ ರಾತ್ರಿ ಭೋಜನ ಸಂಸ್ಕಾರ - ಪ್ರತಿ ತಿಂಗಳ ಮೊದಲನೆಯ ದಿನ ಮುಂಜಾನೆ 05:30 ಗಂಟೆಗೆ
26. ಸುವಾರ್ತಿಕರ ಕೂಟ — ಮೊದಲ ಶನಿವಾರ ಸಾಯಂಕಾಲ 05:30 ಗಂಟೆಗೆ
27. ಮಾತಾ-ಪಿತೃಗಳಿಗಾಗಿ ಪ್ರಾರ್ಥನೆ — ಪ್ರತಿ ಮೊದಲನೆಯ ಭಾನುವಾರ ಸಾಯಂಕಾಲ 04:00 ಗಂಟೆಗೆ
28. ಪೂರ್ಣ ರಾತ್ರಿ ಪ್ರಾರ್ಥನೆ — ಪ್ರತಿ 2 ನೇ ಶುಕ್ರವಾರ ಸಾಯಂಕಾಲ 09:30 ಗಂಟೆಗೆ
29. ಉಪವಾಸ ಪ್ರಾರ್ಥನೆ — ಮೊದಲನೆ ಶನಿವಾರ ಬೆಳಿಗ್ಗೆ 09:30 ಗಂಟೆಗೆ
30. ಪವಿತ್ರ ರಾತ್ರಿ ಭೋಜನ ಸಂಸ್ಕಾರ — 2 ನೇ ಭಾನುವಾರದ ಆರಾಧನೆಯಲ್ಲಿ
31. ಪ್ರಾತಃಕಾಲದ ಧ್ಯಾನ — ಪ್ರತಿದಿನ ಮುಂಜಾನೆ 05:00 ಗಂಟೆಗೆ
32. ಸಿಬ್ಬಂದಿ ವರ್ಗದ ಧ್ಯಾನ — ಪ್ರತಿದಿನ ಮುಂಜಾನೆ 09:00 ಗಂಟೆಗೆ
33. ಕಛೇರಿ (ಭಾನುವಾರ ಹೊರತುಪಡಿಸಿ) — ಮುಂಜಾನೆ 09:00 ರಿಂದ ರಾತ್ರಿ 09:00 ರ ವರೆಗೆ

**The details of our Bank Accounts are given below. Please inform us the details of your remittances.**

| Bank | Branch | Name | IFSC Code No. | Account Number |
|---|---|---|---|---|
| 1. STATE BANK OF INDIA | Triplicane, Chennai -5 | S. Sam Selva Raj | SBIN 0000249 | 102329 34679 |
| 2. ICICI BANK | Anna Salai, Chennai -2 | Echo of His Call | ICIC 0006038 | 6038 05022319 |

**RNI NO. 70107/98**
**Postal Regn. No. TN/CH/(C)/195/21-23**
**WPP NO. TN/PMG(CCR)/WPP- 219/21-23**
**Date of Publication: Second week of every month**
**Date of Posting : 9th & 10th of every month**
**Posted at "Egmore RMS / 1 Patrika Channel"**
**on 10th FEBRUARY 2021**
**If un-delivered please return to:**
**ECHO OF HIS CALL (KANNADA)**
**P.O. Box No. 2957,**
**Chepauk, Chennai - 600 005, INDIA.**
**Phone: (+ 91- 44) 2852 8282, 2852 9293, 2854 7766**

***JESUS LOVES YOU!***

To

*GOD BLESS YOU!*

Owned and published by **S. Sam Selva Raj** from 18, Mohammed Abdullah Sahib Street, Chepauk, Chennai-600 005 and printed by him at **Echo of His Call Printers** 18, Mohammed Abdullah Sahib Street, Chepauk, Chennai-600 005. Editor: **S. Sam Selva Raj.**